



ಸಂಪುಟ ೬ | ಸೆಪ್ಟಂಬರ್ ೧೯೪೭ | ಸಂಚಿಕೆ ೬

## ಕುಹಕಿಡಿಗಳು

‘ವಂದೇ ಮಾತರಂ’ ಎಂದು ಹುಡುಗರು ಹಾಡಕೂಡದೆಂದು ಹಲವು ಪಿತೃಗಳು ಚಳುವಳಿ ಮಾಡುತ್ತಿದ್ದಾರಂತೆ.

* * *

ರೈಲ್ವೆಯವರು ಒಬ್ಬೊಬ್ಬ ಕೆಲಸಗಾರನಿಗೂ ೧,೦೦೦ ರೂಪಾಯಿ ಬೋನಸ್ಸು ಬೇಕು ಎಂದು ಕೇಳಿರುವರಂತೆ– ಹಿಂದಿನ ಐದುವರ್ಷ ಅವರಿಗೆ ಬರಬೇಕಾದ ತುಟ್ಟಿಭತ್ಯದ ಸಲುವಾಗಿ—

—ಆ ಐದು ವರ್ಷಗಳಲ್ಲಿ ಅವರಿಗೆ ದೊರಕಿರುವ ‘ಮೇಲ್ಸಂಪಾದನೆ’ಯನ್ನು ಸರ್ಕಾರಕ್ಕೆ ಕೊಟ್ಟರೆ— ಅವರು ಸಾವಿರ ರೂಪಾಯಿ ಬೋನಸ್ಸನ್ನು ಸಂತೋಷವಾಗಿ ಕೊಡುತ್ತಾರೆ ಎಂಬ ಸುದ್ದಿಗೆ ಬುಡವೇ ಇಲ್ಲವಂತೆ.

* * *

ಬಾಪೂಜಿ ಕಲ್ಕತ್ತಾಕ್ಕೆ ಬಂದರೆಂದು ಅಲ್ಲಿದ್ದ ಗೂಂಡಾಗಳೆಲ್ಲಾ ಪಂಜಾಬಿಗೆ ಓಡಿಹೋದರಂತೆ.

* * *

ಪಂಚ ಆಬ್‌ನಲ್ಲಿ ಈಗ ಆರನೇ ನದಿ ಹರಿಯುತ್ತಿದೆಯಂತೆ—

—ಕಣ್ಣೀರಿನ ವೈತರಣಿ—

*   *   *

ಪಂಜಾಬಿನ ನಿರಾಶ್ರಿತರೆಲ್ಲಾ "ಚಲೋ ದಿಲ್ಲಿ" ಹಾಡುತ್ತಿರುವರಂತೆ—

—ಅದರಲ್ಲಿ ೧೦,೦೦೦ ಜನ "ಚಲೋ ಮದ್ರಾಸ್" ಎಂದು ಪಲ್ಲವಿ ಸೇರಿಸಿದ್ದಾರಂತೆ.

*   *   *

ಇನ್ನೂರು ಜನ ಬಾಳೇಹಣ್ಣು ಗೊನೆ ಮಾರುವವರು ನಂಜನಗೂಡಿಗೆ ಪ್ರಯಾಣ ಬೆಳಸಿದರಂತೆ—

—ಅವರಿಗಾಗಿ ಒಂದು ರೈಲ್ವೆ 'ಡಬ್ಬಿ' ಮಿಾಸಲಾಗಿರಿಸಿದ್ದರಂತೆ.

*   *   *

"ಭೂತದ ಮನೆ" ಎಂದು ಹೆಸರಾದ ಮನೇನ ಬಾಡಿಗೆಗೆ ತೆಗದುಕೊಂಡು ಅಲ್ಲಿ ವಾಸಮಾಡುತ್ತಿದ್ದನಂತೆ—

—ಒಂದು ತಿಂಗಳಾದಮೇಲೆ ತಿಳಿಯಿತಂತೆ – ಭೂತಕ್ಕೇ ಮನೆ ಬಾಡಿಗೆ ಕೊಡುವುದೆಂದು.

*   *   *

ಉದಕಮಂಡಳದಲ್ಲಿ ಮನೆ ಬಾಡಿಗೆ ಹೆಚ್ಚಾಗಿದೆಯಂತೆ—

—ಓಹೋ! ಈ ಮಾಜಿ, ಮಾಜಿ ಆಗುವ, ದಿವಾನರುಗಳೆಲ್ಲಾ ಅಲ್ಲಿಗೆ ಹೋಗುವುದರಿಂದಲೋ ?

*   *   *

ಅರಮನೆ ಸತ್ಯಾಗ್ರಹಮಾಡುವುದು 'ದೊರೆಯ ತನಕ ದೂರು' ಅಷ್ಟೇ – ಪತ್ರಿಕೆಯಲ್ಲಿ ಹೇಳಿಕೆ—

—ಹೌದು ! ಆದರೆ ದೂರುವುದಕ್ಕೆ ಪೋಲೀಸಿನವರು ಬಿಡಬೇಕಲ್ಲಾ !

*   *   *

'ಸತ್ಯಾಗ್ರಹದ' ಕೂಗು ಕೇಳಿಸಿದಾಗ—ಸದ್ಯ ! ಒಂದು ಸಾವಿರ ನಿರುದ್ಯೋಗಿಗಳಿಗೆ ಪೋಲೀಸಿಲಾಖೆಯಲ್ಲಿ ಕೆಲಸ ಸಿಕ್ಕಿತಪ್ಪಾ—

—ಎನ್ನುವುದು ಖಚಿತವಲ್ಲವಂತೆ.

*   *   *

ಅರಣ್ಯರೋದನದಿಂದ ಅರಣ್ಯ ಸತ್ಯಾಗ್ರಹ !—

—ಆಲಸ್ಯದಿಂದ ಅಮೃತವೂ ನಂಜೇ. ಅಲ್ಲವೇ ?

---

# ಉರಿಗಾಳು

" ಸರ್. ಸಿ. ಪಿ. ಯವರು ರಾಜಿನಾಮೆ ಇತ್ತು ವಿಶ್ರಾಂತಿಗಾಗಿ ನೀಲಗಿರಿಗೆ ಬಂದು ತಂಗಿದ್ದಾರೆ" (ಸುದ್ದಿ)... ... ತಮಿಳರೂ ಮಲಯಾಳಿಗಳೂ ತಮ ತಮಗೆ ಬೇಕೆಂದು ಕೇಳುತ್ತಿರುವ ಆ ಕನ್ನಡ ಭೂಮಿ ಸಂಪೂರ್ಣ ಸ್ವತಂತ್ರವಾಗಿಯೇ ಇರಬೇಕೆಂದು ಅಲ್ಲೊಂದು ಘೋಷಣೆ ಹೊರಡಿಸುವರೋ ಏನೊ ?

* * * *

ಟ್ರಾವಂಕೂರು ಸಂಸ್ಥಾನದ ರಾಜಧಾನಿಯ ದರ್ಬಾರ್ ಹಾಲಿನ ಧ್ವಜ ಸ್ತಂಭದ ಮೇಲೆ ಆಗಸ್ಟ್ ೧೫ ರಂದು ಯುವರಾಜರು ಇಂಡಿಯಾದ ರಾಷ್ಟ್ರಧ್ವಜವನ್ನು ಹಾರಿಸಿದರು (ಪತ್ರಿಕೆ)....ಎಂಥೆಂಥವರ ರೇಡಿಯೋ ಭಾಷಣವೂ ಕೂಡ ಕೇವಲ ಗಾಳಿಪಾಲು ಎಂಬುದಕ್ಕೆ ಇದೂ ಒಂದು ಉದಾಹರಣೆ.

* * * *

" ಸಂಯುಕ್ತ ರಾಷ್ಟ್ರಸಂಘದ ಆಜ್ಞೆಯನ್ನು ನಾನು ನೆರವೇರಿಸುವುದಿಲ್ಲ" (ಸ್ಮಟ್ಸ್)....ಚರ್ಮಕ್ಕೂ ಕರ್ಮಕ್ಕೂ ಏನೂ ಸಂಬಂಧವಿಲ್ಲವೆಂಬುದನ್ನು ಇದರಿಂದಾದರೂ ನಾವು ತಿಳಿಯೋಣ.

* * * *

ಇದುವರೆಗೆ ನಮ್ಮಲ್ಲುಂಟಾದ ಎಲ್ಲ ಕಷ್ಟನಷ್ಟಗಳಿಗೂ ಪರಂಗಿಯವರೇ ಹೊಣೆಗಾರರು ಎಂದು ಹೇಳುತ್ತಿದ್ದ ಹಾಗೆ, ಇನ್ನು ಮುಂದೆಯೂ ಯಾವುದಾದರೂ ಒಂದು ಜಾತಿಯನ್ನು ಭಾರತದಲ್ಲೇ ಹುಡುಕಿ ನಿರ್ಧರಿಸಬೇಕೆಂದು ರಾಜತಂತ್ರಜ್ಞರು ನಿಶ್ಚಯಿಸಿರುವರಂತೆ (ಪತ್ರಿಕೆ)....ದಕ್ಷಿಣ ಇಂಡ್ಯಾದಲ್ಲಿ ಈ ಕೆಲಸ ಆಗಲೇ ನೆರವೇರಿದೆ.

* * * *

ಬೆಂಗಳೂರು ನಗರದ ಹೆಸರನ್ನು ಬ್ಯಾಂಗಳೂರ್ ಎಂದು ಆಂಗ್ಲರು ಕೆಡಿಸಿದ್ದನ್ನು ಇನ್ನುಮೇಲೆ ತಿದ್ದಿ ಸರಿಪಡಿಸುವ ಯೋಚನೆ ಸ್ವಾತಂತ್ರ್ಯಾಭಿಮಾನಿಗಳಾದ ಅಧಿಕಾರಿಗಳಿಗೆ ಉಂಟಾಗಿದೆ (ಸುದ್ದಿ)....ಸಿರಿಗನ್ನಡಂಗೆಲ್ಗೆ.

* * * *

" ಕೇಂದ್ರ ಮಂತ್ರಿಮಂಡಲದಲ್ಲಿ ಕನ್ನಡಿಗರಿಲ್ಲದಿರುವುದು ನಮಗೆ ಒಂದು ಭಾರಿ ಧಕ್ಕೆ" (ಪತ್ರಿಕೆ) .......ಕನ್ನಡರಾಷ್ಟ್ರದ ಕೇಂದ್ರ ಮಂತ್ರಿ ?

* * * *

" ಇಂಡ್ಯಾದ ಪ್ರಾಂತ ಸರ್ಕಾರಗಳೂ ಕೇಂದ್ರ ಸರ್ಕಾರವೂ ಇನ್ನುಮೇಲೆ ಬ್ರಿಟಿಷ್ ಬಿರುದಾವಳಿಗಳನ್ನು ಕಾಗದ ಪತ್ರಗಳಲ್ಲಿ ಪತ್ರವ್ಯವಹಾರಗಳಲ್ಲಿ ಉಪಯೋಗಿಸುವುದಿಲ್ಲ" (ಪ್ರಕಟಣೆ).. ...ಕಾಗದದ ಉಳಿತಾಯಕ್ಕೆ ಇದು ಒಂದು ಒಳ್ಳೆ ಉಪಾಯ.

* * * *

" ರಾಷ್ಟ್ರಧ್ವಜವನ್ನು ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರಿ ........" (ಪತ್ರಿಕೆ) ... ...ಇವರೇ ದೇಶಕ್ಕೆ ಮಾರಿ !

* * * *

" ಇಂಡ್ಯಾ ಸರ್ಕಾರದ ನೌಕರಿಗಳನ್ನೆಲ್ಲ ಇನ್ನುಮೇಲೆ ಬುದ್ಧಿವಂತರಿಗೆ ಮಾತ್ರವೇ ಕೊಡಲಾಗುವುದು" (ಪ್ರಕಟಣೆ).. .....ಹಾಗಾದರೆ, ನಮ್ಮ ಮಕ್ಕಳ ಗತಿ ?

* * * *

---



# ಗಾಂಧೀ ಹಬ್ಬ

---

**ಚೊ**ಚ್ಚಲು ಸ್ವಾತಂತ್ರ್ಯ-ಹಬ್ಬವನ್ನು ಹೇಗೆ ನಡೆಸಬೇಕೆಂದು ತಿಳಿಯದೆ ಅನೇಕರು ಅನೇಕ ವಿಧವಾಗಿ ಗೋಳಾಡಿದರು. ಕೆಲವರು ಬವಣೆಬಿದ್ದು ಬೇಳೆ ಬೆಲ್ಲ ತಂದು ಒಬ್ಬಟ್ಟು ಮಾಡಿಸಿದರು. ಕೆಲವರು ಗಾಂಧೀಪ್ರಿಯವಾದ 'ಮೈಸೂರು ಬಾದಾಮಿ'ಯಿಂದಲೇ ಬರ್ಫಿ-ಬಾತುಗಳನ್ನು ಮಾಡಿಸಿ ಉಂಡು ಉರುಳಾಡಿದರು. ಕೆಲವು ಬಂಗಲೆಗಳಿಂದ ರಾಗೀಬಾಲ್ - ಈರುಳ್ಳಿಗೊಜ್ಜಿನ ಸಂಭ್ರಮದ ವಾಸನೆಯೂ ಹೊರಬಿತ್ತು. 'ಗಾಂಧೀಹಬ್ಬವೆಂದರೆ ಉಪವಾಸವಲ್ಲವೇ?' ಎಂಬ ದೃಷ್ಟಿಕೋಣದವರು ಖಾಲೀ ಹೊಟ್ಟೇಮೇಲೆ, ಒದ್ದೆ ಬಾವುಟ ಹಾರಿಸಿಕೊಂಡು ತಿರುಗಾಡಿದರೆಂದೂ ತಿಳಿಯಿತು. ಇದು ಅಕ್ಕಿಯ ಅಭಾವದಿಂದಲೋ ಅಥವಾ ಅವರ ಅಜೀರ್ಣಶಕ್ತಿಯಿಂದಲೋ, ತಿಳಿಯದಾದರೂ, ಮುಂದಿನ ವರ್ಷದಿಂದ ಈ ದಿನಾಚರಣೆಯನ್ನು ಒಂದು ರಖಂ ನವನವೀನತೆಯಿಂದ ನಡೆಸಬೇಕಾದ್ದು ಎಲ್ಲರೂ ಓಟುಮಾಡಬೇಕಾದ ವಿಷಯ.

ಗಾಂಧೀ ಹಬ್ಬದ ದಿನ ಎಲ್ಲೆಲ್ಲೂ ಕಂಡು ಬಂದದ್ದು ತ್ರಿವರ್ಣಧ್ವಜ. ಮನೆ ಮಾರುಗಳಮೇಲೆ, ಮೋಟಾರ್‌ಗಳ ಮೂತಿಯಲ್ಲಿ, ಬೈಸ್ಕಲ್‌ಗಳ ಮುಂದೆ, ಟೋಪಿಗಳಮೇಲೆ, ಹ್ಯಾಟಿಗೆ ಚುಚ್ಚಿಕೊಂಡು, ಕೋಟ್ ಕಾಲರ್‌ಗಳ ಕೊನೆಯಲ್ಲಿ ಮಹಿಳೆಯರ ಸೆರಗ ನೆರಿಗೆಗಂಟಿಕೊಂಡು, ಮಕ್ಕಳ ಮೈಯಲ್ಲೆಲ್ಲಾ; ಇತ್ಯಾದಿ.... ಇತ್ಯಾದಿ........

ಕೆಲವು ಮನೆಗಳಲ್ಲಿ ಭಾರತಾಂಬೆ ಹಾಗೂ ಗಾಂಧೀ ವಿಗ್ರಹದ ಸೊಬಗು, ಗಂಟೆ ಶಬ್ದ, ಮಂತ್ರಘೋಷಣೆ, ಕರ್ಪೂರದ ಗಾಳಿ ಇವು ಹೊರಸೂಸುತ್ತಿದ್ದರೂ, ಯಾವರೀತಿ ಪೂಜೆಮಾಡಬೇಕೆಂದು ತಿಳಿಯದೆ ಪುರೋಹಿತರು ಪೇಚಾಡಿದರಂತೆ. ಈ ಹೊಸ ಪೂಜೆಗೆ - ತಿಥಿ ದಕ್ಷಿಣೆಗಿಂತ ಜಾಸ್ತಿ ಕೇಳಿದುವಂತೆ ಕೆಲವು ಖದೀಮ ವಿಭೂತಿ ಪಟ್ಟೆಗಳು. ಕೊಡೋಣ ಅದಕ್ಕೇನಂತೆ; ತಕ್ಕ ಮಂತ್ರಗಳನ್ನು ಕಟ್ಟಿ ಕಲಿತು ಕಿರಿಚಲಿ ಮುಂದಿನ ಸಾರಿಯಿಂದ !

ಹಳೇ ಮಾಮೂಲು ಮಂತ್ರಗಳನ್ನೆಲ್ಲಾ ಬಿಟ್ಟು; "ಸ್ವಸ್ತಿಶ್ರೀ............ ಭ್ಯುದಯ....ಗಾಂಧೀ ಸಂವತ್ಸರೇ, ಗಾಂಧೀಮಾಸೇ, ಗಾಂಧೀಪಕ್ಷೇ, ಗಾಂಧೀ ನಕ್ಷತ್ರೇ ಶುಭತಿಥೌ........" ಇತ್ಯಾದಿ ಮಂತ್ರಗಳನ್ನು ಕಲಿತುಕೊಳ್ಳಲಿ. ಕೇಸರಿ-

ಬಿಳಿ-ಹಸುರು ಬಣ್ಣದ ಹೂದಂಡೆಗಳಿಂದ ಸ್ವಾತಂತ್ರ್ಯ-ಪಿತೃಗಳನ್ನು [Fathers of Freedom] ಪೂಜಿಸಲಿ. ಇದೇರೀತಿ ಮಹಾತ್ಮರ ಹೆಸರಿನಲ್ಲಿ :

> ಭಾರತಪುತ್ರೇ ನಮಃ, ಅಸ್ತಿಪಂಜರೇ ನಮಃ
> ಖಾದಿಧಾರಿಯೇ ನಮಃ, ಉಪವಾಸವಾಸಿಯೇ ನಮಃ
> ಭೂಫಲಪ್ರಿಯಾಯ ನಮಃ, ಮೇಕೆ ಹಾಲು ಮಹಾತ್ಮಾಯ ನಮಃ
> 'ಚಾರು'ನಯನೇ ನಮಃ, ದಂಡಧಾರಿಯೇ ನಮಃ (ಆದರೂ)
> ಅಹಿಂಸಾಚಾರ್ಯಾಯ ನಮಃ ......................

ಇತ್ಯಾದಿ ಸಹಸ್ರನಾಮಗಳು ಉದ್ಘವಿಸಿಕೊಳ್ಳಲಿ ! ಇದೇರೀತಿ ಮಿಕ್ಕ ಮುಖಂಡರೂ ಮಂತ್ರಗಳಾಗಲಿ.

ಮುಂದಿನ ಆಗಸ್ಟ್ ೧೫ ರಂದು ಯಾವ ಮನೆ ಮುಂದೆ ನೋಡಿದರೂ ತ್ರಿವರ್ಣದ ರಂಗೋಲಿ ಇರಬೇಕು. ಮಧ್ಯೆ ಚಕ್ರ ! ಮಾವಿನ ಹಸುರು ಚಿಗುರೆಲೆ, ಬಿಳಿ ಹಾಗೂ ಕೆಂಪು ಕ್ರೋಟನ್‌ಗಳಿಂದ ರಂಜಿಸುವ ತೋರಣಗಳು ನಮ್ಮ ಮನೆಗಳ ದ್ವಾರಾಲಂಕಾರಮಾಡಲಿ. ಸಾಧ್ಯವಾದಷ್ಟೆಲ್ಲಾ ರೆಡಿಮೇಡ್ ಬಟ್ಟೆಯವರು ತ್ರಿವರ್ಣದ ಉಡುಪುಗಳನ್ನು ಬಾಡಿಗೆ ಕೊಡುವ ಏರ್ಪಾಡುಮಾಡಬೇಕು— ದಸರಾ ದರ್ಬಾರಿನ ಕಾಳಾಂಬರದಂತೆ. ಈಸಾರಿಯಂತೆ ಅನ್ಯಾಯಮಾಡದೆ ಮುಂದಿನಸಾರಿಯಿಂದ ಹೋಟಲುಗಳು ಬಾಗಿಲು ತೆಗೆದುಕೊಂಡೇ ಸ್ವತಂತ್ರಾಚರಣೆ ಮಾಡಬೇಕು. ಮಾಣಿಗಳು ಹೊರಗೆ ಹೋಗಿ ಮಜಾಮಾಡಲಿ. ಮಾಲೀಕರುಗಳು ಅಂದು ನಮಗೆಲ್ಲಾ ಬಗೆಬಗೆಯ ಭಾತು-ಬರ್ಫಿಗಳನ್ನುಣಿಸಿ ಬಾಯ್ತುಣಿಸಲಿ !

ಮನೆಗಳಲ್ಲೂ, ಮಾವನ ಮನೆಗಳಲ್ಲೂ [ಹೋಟೆಲುಗಳು], ಅತ್ತೆಮನೆಗಳಲ್ಲೂ ಆದಿನ ಆಗಸ್ಟ್ ೪೭ ರ ಚಿರ ನೆನಪು ಕೊಡುವಂತಹ ಭಕ್ಷ್ಯಗಳನ್ನೇ ಬೇಯಿಸಬೇಕು. ಮೊದಲನೆಯದಾಗಿ,

(1) ಗಾಂಧೀ ಚಟ್ನಿ : ಮುಖ್ಯವಾಗಿ ಇದಕ್ಕೆ ಬೀಳಬೇಕಾದ್ದು ಸಾಕಷ್ಟು ಪಿತ್ತಭರಿತವಾದ ಕಹೀಕಾಯಿ – ಸಿಪ್ಪೆ ಸಹಿತ. ಉಪ್ಪಿಲ್ಲ – ಕಾರವೂ ಉಹುಂ.

(2) ರಾಜೇಂದ್ರನ್ನ : ಇದು ನಮ್ಮ ಅನ್ನದಾತ ಡಾಕ್ಟರ್ ಬಾಬುವಿನ ಯಾವತ್ತು ನೆನಪಿಗಾಗಿ. ಇನ್ನುಮುಂದೆ ಎಂತಹ ರಾಮರಾಜ್ಯದಂಥ ಜೀವನವಾಗಿ, ಬೆಣ್ಣೆ ರೂಪಾಯಾಗಿ, ಸಣ್ಣಕ್ಕಿ ಸೂರೆಯಾದರೂ, ಮಂಡಿಗಳನ್ನೆಲ್ಲಾ ಹುಡುಕಿ, ಗಜೇಂದ್ರ ಅಲ್ಲ ರಾಜೇಂದ್ರಭೋಗವನ್ನೇ ತಂದು, ಆದಿನ ಈ ಅನ್ನ ಕಲಸಬೇಕು. ಈ ಭಾತಿನಲ್ಲಿರಬೇಕಾದ 'ಎಳೆಯು'ಕಲ್ಲಿನ ಅಂಶ ಕೇವಲ ಶೇಕಡಾ ೧೫.

(3) ಪಟೇಲ್ ಪಾಯಸ—ತುಸು ಹುಳಿ, ಹುಳಿಯಾಗಿರುತ್ತೆ. ಅನೇಕರು ರುಚಿ ನೋಡಿದ್ದಾರೆ—ಜೀರ್ಣಶಕ್ತಿ ಕೊಂಚ ಚೆನ್ನಾಗಿರಬೇಕು.

(4) ಜವಹರ್ ಜಾಮೂನು—ಜೋನಿಬೆಲ್ಲ-ಲವಂಗ ಇವೆರಡರ ಮಹಾ ಭಟ್ಟಿ–

ಇವಲ್ಲದೆ ಬಲ್ದೇವ್ ಬೋಂಡ, ಜೈಹಿಂದ್ ಜಿಲೇಬಿ, ಸೀಪಿ ವಡೆ, ಸೀ ಆರ್ ಚೌಚೌ, ಸುಭಾಷ್ ಸಂಡಿಗೆ ಇತ್ಯಾದಿ ಭಕ್ಷ್ಯಗಳೆಲ್ಲಾ ಅಮರ ಭಕ್ಷ್ಯಗಳಾಗಿ, ಮುಂಬರುವ ನಮ್ಮ ತಲತಲಾಂತರಗಳಿಗೆ ನಮ್ಮ ಸ್ವಾತಂತ್ರ್ಯ- ಸಿಂಗಗಳ ಸಿಹಿ ಹಾಗೂ ಖಾರ - ನೆನಪು ತರಲಿ

ಇನ್ನುಮುಂದೆ ಬರುವ ಆಗಸ್ಟ್ ೧೫ನೇ ತಾರೀಖುಗಳಲ್ಲಿ, ನಮ್ಮೂರು, ನಗರ ಕೇರಿಗಳ ಬನ-ಬನ-ಅಪ-ವನಗಳಲ್ಲಿ ಬಣ್ಣದ ಚಿಟ್ಟೆಗಳಂತೆ ನಮ್ಮ ಹೆಣ್ಣು ಮಕ್ಕಳನ್ನು ನಾವು ಓಡಾಡಬಯಸುವುದಿಲ್ಲ. ನಮ್ಮ ಮಹಿಳೆಯರೆಲ್ಲಾ ತ್ರಿವರ್ಣಾಂಬರ, ತ್ರಿವರ್ಣಬ್ಲೌಸ್, ತ್ರಿವರ್ಣ-ಚಿಂದಿ (ಚಿಂದಿ= ಕರ್ಚಿಫ್), ತ್ರಿವರ್ಣ ಚಪ್ಪಲಿ ಇತ್ಯಾದಿಗಳಿಂದ ಅಲಂಕೃತರಾಗಿ, ತ್ರಿವರ್ಣ - ಸೂಟ್ ಧಾರಿಗಳಾದ ನಮ್ಮ 'ಹುಡುಗ'ರೊಡನೆ ಕೈ - ಕೈ ಮಿಲಾಯಿಸಿಕೊಂಡು, ಉದ್ಯಾನಗಳಲ್ಲೂ, ರಸ್ತೆಗಳಲ್ಲೂ, ಗಲ್ಲಿಗಳಲ್ಲೂ ಅಲೆಯ ಹತ್ತಿದ್ದರೆ, ಎಂತಹ ಹುಚ್ಚನಿಗೂ ಸುತ್ತಿಗೆಯಿಂದ ತಲೆಗೆ ಹೊಡೆದಂತೆ 'ಗಾಂಧೀಹಬ್ಬದ' ನೆನಪಾಗುವುದರಲ್ಲಿ ಸಂಶಯವಿಲ್ಲ.

ಇದೇರೀತಿ ತಿರುಪತಿ ಇತ್ಯಾದಿ ಸಂಪ್ರದಾಯದ ಒಕ್ಕಲುಗಳು ಕೂಡ 'ಸ್ವಾತಂತ್ರ್ಯ-ದಿನ'ದಂದು ತಮ್ಮ ತಮ್ಮ ಹಣೇ-ಬರಹವನ್ನು ತ್ರಿವರ್ಣಗಳಿಂದ ತಿದ್ದಿದರೆ ಬಾವುಟ ಬೇಕೇ ಇಲ್ಲವೆಂಬುದು ಶಂಕೆ ಇಲ್ಲದ ಮಾತು.

ನಮ್ಮ ಸ್ನೇಹಿತರೊಬ್ಬರು ಮೊನ್ನೆ ೧೫ ರಂದು ಹಬ್ಬ ಯಾವರೀತಿ ಮಾಡಬೇಕೆಂದು ತಿಳಿಯದೆ—" ಕೊನೆಗೆ ರೇಗಿ ಉದ್ದಿನ ವಡೆ ಮಾಡಿಸಿದೆ - ಕೊಂಚ ನೀರು ಅಲ್ಲ ಕೀರು ಕಾಯಿಸು ಎಂದೆ" ಎಂದರು. ಏನು ತಪ್ಪು ಇದರಲ್ಲಿ ? ಎಂದು ಕೇಳಿದರು. " ಏನೂ ತಪ್ಪಿಲ್ಲ. ಬಹು ಸಮಂಜಸವಾದ ಅರ್ಥ ಗರ್ಭಿತವಾದ ಭಕ್ಷ್ಯ ವಡೆ. ಇವೊತ್ತು ಬಿಳಿಯನ ತಿಥಿಯಲ್ಲವೇ ರಾಯರೇ ?" ಎಂದೆ.

" ರೀ....ರೀ....ಹೌದಲ್ರೀ. ಅಂದ ಹಾಗೇನೇ........ವಡೆಯೇ ಸರಿ ಆ ನನ್ನ" ....ಅನ್ನುತ್ತಾ........" ಲೇ........ಏನು ? ಒಂದ್ನಾಲ್ಕು ಒಡೆ-ಚಟ್ನಿ ತಗೊಂಬಾ ನಮ್ಮ ಸ್ನೇಹಿತರಿಗೆ, ಹಾಗೇ ಕೊಂಚ........ಬೆಳಗಿನ ಡಿಕಾಕ್ಷನ್ ಇದೆಯಲ್ಲ? - -' ಎನ್ನುತ್ತಾ ಮೆಲ್ಲಗೆ ಎದ್ದು ಒಳಗೆ ಹೋದರು........

—ಟೀಯಸ್ಸಾರ್ರಾವ್.

—o—

# ಹಸುರು ಟ್ರಂಕು

ರೈಲು ಆ ಸ್ಟೇಷನ್ನನ್ನು ಬಿಟ್ಟು ಹೊರಟಿತು. ಅಲ್ಲಿ ಹತ್ತಿದ್ದ ಆ ಅರ್ಧ ನರೆಗೂದಲಿನ ಮಹಾಶಯ ನನ್ನ ಎದುರಿಗೇ ಬಂದು ಕೂತವನು, ಮೇಲ್ಗಡೆ ಇಟ್ಟಿದ್ದ ನನ್ನ ಟ್ರಂಕಿನ ಕಡೆ ನೋಡಿ, ಇದ್ದಕ್ಕಿದ್ದಹಾಗೆ ಹುಚ್ಚುಹಿಡಿದವನಂತೆ, "ಬಿಸಾಕ್ರೀ ಹೊರಗೆ—ಬಿಸಾಕ್ರೀ ಹೊರಗೆ—ಹಾಳಾದ್ದು ನಿಮ್ಮ ಹಸುರು ಟ್ರಂಕನ್ನು" ಎಂದು ಅರಚಿದ. ನನಗೆ ಮೊದಲು ಅರ್ಥವೇ ಆಗಲಿಲ್ಲ. ಆತ ಹುಚ್ಚನಿರಬೇಕೆಂದು ನಿರ್ಧರಿಸಿದೆ. ಆತ ಪುನಃ ಹಾಗೆಯೇ ಅರಚುತ್ತಾ ರೈಲಿನಿಂದ ಹೊರಗೆ ನನ್ನ ಟ್ರಂಕನ್ನು ಬಿಸಾಡುವುದಕ್ಕೆ ಸಿದ್ಧನಾದ. ನಾನು ಕೂಡಲೆ ಅದನ್ನು ತೆಗೆದು ಬೆಂಚಿನ ಕೆಳಗೆ ಆತನಿಗೆ ಕಾಣದಂತೆ ಮರೆಮಾಡಿ ಇಡಲು, ಆತ ಕ್ರಮೇಣ ಶಾಂತನಾಗಿ ಪುನಃ ಕುಳಿತುಕೊಂಡ. ನಾನು ಆತನಿಗೆ "ಏಕ್ರೀ, ನಿಮಗೆ ಹಸುರು ಬಣ್ಣ ಕಂಡ್ರೆ ಆಗ್ದೇನು?" ಎಂದು ಕುತೂಹಲದಿಂದ ಪ್ರಶ್ನಿಸಿದೆ. ಆತ ನಿಟ್ಟುಸಿರು ಬಿಟ್ಟು "ಹಸುರು ಬಣ್ಣ ಆಗ್ದೇ ಏನ್ರೀ—ಪಾಪ! ಅದರದೇನು ತಪ್ಪು—ಆದ್ರೆ—ಹಸುರು ಟ್ರಂಕು— ಹಸುರು ಟ್ರಂಕು—(ಹಲ್ಲುಕಡಿಯುತ್ತಾ)— ಆ ಹಾಳಾದ್ದು ಹಸುರು ಟ್ರಂಕಿನ ಹೆಸರೇ ಹುಚ್ಚು ಹಿಡಿಸುತ್ತೆ, ನನ್ನ—ಆ ಹಸುರು ಟ್ರಂಕಿಗಲ್ಲದಿದ್ರೆ ನಾನು ಈಗ– ಈ ಹಾಳಾದ್ದು ವಕಾಲತ್ತಿನ ವೃತ್ತಿಬಿಟ್ಟು — ಮುನಸೀಫ, ಮುನಸೀಫ ಆಗಿ ಹತ್ತುವರ್ಷ ಆಗ್ತಿತ್ತು" ಎಂದು ಹೇಳಿ ಪುನಃ ನಿಟ್ಟುಸಿರು ಬಿಟ್ಟ; ಸುಸ್ತಾದ; ಸ್ವಲ್ಪ ಸುದಾರಿಸಿಕೊಂಡ. ಆಮೇಲೆ ಹೇಳಿದ;

"ಹತ್ತುವರುಷದ ಹಿಂದೆ ಒಂದು ಪಟ್ಟಿ ಮಾಡಿದ್ರುಕಂಡ್ರಿ; ಮೈಸೂರು ಸೀಮೆಯಲ್ಲಿನ ವಕೀಲರಲ್ಲಿ ಹತ್ತು ಜನಗಳನ್ನಾರಿಸಿ, ಮುನಸೀಫ್ ಕೆಲಸ ಅವರಿಗೆ ಕೊಡಬೇಕು ಅಂತ ಮಾಡಿದ್ರು. ಅದರಲ್ಲಿ ನನ್ನದೇ ಮೊದಲನೇ ಹೆಸರು. ಪಟ್ಟಿಯಲ್ಲಿದ್ದವರನ್ನು ಒಂದಾವರ್ತಿ ಶ್ರೇಷ್ಠನ್ಯಾಯಾಧೀಶರ ಸಮ್ಮುಖದಲ್ಲಿ ಕರೆಸಿ, ಅವರುಗಳನ್ನು ಪರೀಕ್ಷಿಸುವ ನೆವದಲ್ಲಿ ಕುಶಲಪ್ರಶ್ನೆಗಳನ್ನು ಹಾಕಿ ಕಳುಹಿಸಿ, ಅವರುಗಳಿಗೆಲ್ಲಾ ಕೆಲಸ ಕೊಡತಕ್ಕದ್ದೆಂದು ನಿಶ್ಚಯವಾಗಿತ್ತು. ಇದಕ್ಕಾಗಿ ಭೇಟಿಗೆಂದು ಒಂದುದಿನ ಗೊತ್ತುಮಾಡಿ ನಮಗೆಲ್ಲರಿಗೂ ಮುಂಚೆಯೇ ತಿಳಿಸಿದ್ದರು. ಕೆಲಸ ಬೇಕಾಗಿದ್ದವರು ಅವರವರಿಗೆ ಸೂಚಿಸಿದ ಕಾಲದಲ್ಲಿ ಹೈಕೋರ್ಟಿನಲ್ಲಿ ಭೇಟಿಗಾಗಿ ಸಕಾಲಕ್ಕೆ ಹಾಜರಿರತಕ್ಕದ್ದೆಂದೂ, ಬಾರದಿದ್ದವರನ್ನು ಪಟ್ಟಿಯಿಂದ ವಜಾ ಮಾಡಲಾಗುತ್ತೆಂದೂ ಖಂಡಿತವಾಗಿ ತಿಳಿಸಿತ್ತು. ನನಗೆ ಬೆಳಗ್ಗೆ ಏಳುವರೆ ಗಂಟೆಗೆ ಭೇಟಿಗೆ ಬರತಕ್ಕದ್ದೆಂದು ತಿಳಿಸಿದ್ದರು. ಸರಿ, ನಾನೂ ಹೋಗಬೇಕಾಯ್ತಲ್ಲ.

ರೈಲಿನಲ್ಲಿ ಹೊರಟರೆ ಬೆಳಗ್ಗೆ ಆರೂವರೆಗೆ ಬೆಂಗಳೂರು ತಲುಪುವುದು, ಅಷ್ಟವೇ ರೈಲು ಸಕಾಲಕ್ಕೆ ಹೋಗುವುದೇ ಅನುಮಾನ, ಸಕಾಲಕ್ಕೆ ಹೋದರೂನೂ ನಾನು ಹೈಕೋರ್ಟ್ ಮುಂದೆ ಹೋಗುವುದಕ್ಕೆ ಸಾಕಷ್ಟು ಕಾಲವಿರುವುದಿಲ್ಲವೆಂದು ಹಿಂದಿನ ದಿನ ಮಧ್ಯಾನ್ಹವೇ ಬಸ್ಸಿನಲ್ಲಿ ಬೆಂಗಳೂರಿಗೆ ಹೋಗಲು ನಿರ್ಧರಿಸಿದೆ. ಅದೇ ದಿನ ಬೆಳಗ್ಗೆ ನನ್ನ ಸ್ನೇಹಿತ ಸುಬ್ಬು ಬೆಂಗಳೂರಿಂದ ಬಂದ, ನಾಲ್ಕು ದಿನಗಳ ರಜದಮೇಲೆ ಅವನಿದ್ದದ್ದು–ಬೆಂಗಳೂರಿನಲ್ಲಿ, ಯಶವಂತಪುರದಾಚೆ, ತುಮಕೂರು ರಸ್ತೆಯಲ್ಲಿ, ಒಂದು ಕಾರ್ಖಾನೆ ಇದೆನೋಡ್ರಿ ಅಲ್ಲಿ–ನೌಕರಿ ಇದ್ದ ಒಬ್ಬಂಟಿಗ ಕಾರ್ಖಾನೆಯ ಆವರಣದಲ್ಲೇ ಒಂದು ಕೊಠಡಿಯಲ್ಲಿ ವಾಸವಾಗಿದ ನನಗೆ ಬೆಂಗಳೂರಿನಲ್ಲಿ ಇಳಿಯಲು ಬಂಧು ಬಳಗ ಮಿತ್ರರು ಯಾರೂ ಇರಲಿಲ್ಲ ಹೋಟಲಿನಲ್ಲಿರಬೇಕಂದು ನಿರ್ಧರಿಸಿದ್ದೆ ಆದರೆ ಸುಬ್ಬು, ' ನನ್ನ ಕೊಠಡಿ ಇರುವಾಗ ನೀನು ಹೋಟಲಲ್ಲಿ ಇಳಿಯುವುದು ಸರಿಯಲ್ಲ ಬಸ್ಸು ಹೇಗಿದ್ರೂ ನಮ್ಮ ಕಾರ್ಖಾನೆ ಮುಂದೆಯೇ ಹೋಗುತ್ತೆ ಅಲ್ಲಿ ಇಳಿದು ಬಿಟ್ಟು ನನ್ನ ಕೊಠಡಿಗೆ ಹೋಗಿ ರಾತ್ರಿ ಅಲ್ಲಿರು ಬೆಳಗ್ಗೆ ಜಾಗ್ರತೆ ಎಬ್ಬಿಸಲಿಕ್ಕೆ ರೂಮಿನಲ್ಲಿ ಅಲಾರಂ ಗಡಿಯಾರ ಇದೆ ಹೊರಗಡೆಯೇ ನಲ್ಲಿ ಇದೆ. ಸ್ನಾನಮಾಡಿ, ಬಟ್ಟೆ ಹಾಕಿಕೊಂಡು ನನ್ನ ಸೈಕಲನ್ನು ತೆಗೆದುಕೊಂಡು ಹೋಟಲಿಗೆ ಹೋಗಿ ಕಾಫಿ ಕುಡಿದು, ಹತ್ತು ಹೈಕೋರ್ಟ್, ಗುಡ್‌ಲಕ್ " ಅಂತ ಹೇಳಿ ರೂಮಿನ ಬೀಗದ ಕೈಯನ್ನು ಕೊಟ್ಟ ಇಳಿಯಲು ಅನುಕೂಲವಾದ ಸ್ಥಳವೇ ಸಿಕ್ಕಿತೆಂದು ಬೀಗದ ಕೈ ತೆಗೆದುಕೊಂಡು ಮಧ್ಯಾನ್ಹ ಬಸ್ಸಿನಲ್ಲಿ ಹೊರಟೆ

ನನ್ನ ಹನರು ಟ್ರಂಕಿನಲ್ಲಿ ನನ್ನ ಹೊಸ ಸರ್ಜು ಸೂಟು, ಶಿಲ್ಕು ಷರಟು ಟೈ, ಕಾಲರ್, ಎಲ್ಲಾ ಹಾಕಿಬಿಟ್ಟು, ಬಹಳ ಶಖೆಯಾದ್ದರಿಂದ ಒಂದು ಮಲ್ಲು ಜುಬ್ಬ ಹಾಕಿಕೊಂಡು, ಹೆಗಲಮೇಲೆ ಒಂದು ಟವಲು ಇಳಿಬಿಟ್ಟು ಬಸ್ಸಿನಲ್ಲಿ ಕುಳಿತೆ ನಮ್ಮೂರಿಂದ ಐದಾರು ಮೈಲಿ ಸಹ ಇನ್ನೂ ಹೋಗಿರಲಿಲ್ಲ, ಪಂಕ್ಚರ್ ಆಯ್ತು ಅಂತ ಬಸ್ಸು ನಿಲ್ಲಿಸಿದ, ಡ್ರೈವರ್. ಸರಿ, ಕತ್ತಲಾಗಿತ್ತು ಅದೆಲ್ಲಾ ಸರಿ ಆಗುವ ಹೊತ್ತಿಗೆ ಸೀಟ್‌ನಲ್ಲಿ ಕೂತು ಬಸ್ಸು ಬಿಡುವುದಕ್ಕೆ ಹೋದರೆ ಅದು ಜಗ್ಗಲೇ ಇಲ್ಲ ಪುನಃ ಒಂದರ್ಧಗಂಟೆ ಅಜಮಾಯಿಷಿ ಮಾಡಿದಮೇಲೆ, ಎಂಜಿನ್ ಕೆಟ್ಟಿಲ್ಲ, ಬ್ಯಾಟರಿ ವೀಕು, ಬಸ್ಸನ್ನು ದಬ್ಬಿದರೆ ತಾನೇ ಸ್ಟಾರ್ಟ್ ಆಗುತ್ತೆ ಅಂತ ಹೇಳಿದ ಇದರರ್ಥ ಹೀಗೆ ಬಸ್ಸಿನಲ್ಲಿರುವ 1st class ಪ್ರಯಾಣಿಕರೂ ಮತ್ತು ಹೆಂಗಸರು ಬಸ್ಸಿನಲ್ಲೇ ಕುಳಿತಿರಬಹುದು, 2nd class ಪ್ರಯಾಣಿಕರು ಬಸ್ಸು ಸ್ಟಾರ್ಟ್ ಆಗುವವರೆಗೂ ನಡೆದು ಬರತಕ್ಕದ್ದು, 3rd class ಪ್ರಯಾಣಿಕರು ಬಸ್ಸಿಗೆ ತಮ್ಮ ಮಾನುಷ ಶಕ್ತಿಯನ್ನು ಎರವುಕೊಟ್ಟು ಮುಂದೆ ಹೋಗುವಂತೆ ಮಾಡತಕ್ಕದ್ದು ನಾನು ಯಾವ ತರಹ ತರಗತಿಯವನು ಎಂದು ನಿರ್ಧರಿಸಿ ಕೊಳ್ಳುತ್ತಿರುವಷ್ಟರಲ್ಲಿ, ಕಂಡಕ್ಟರ್ 'ಇಳೀರಿ ಕೆಳಗೆ' ಅಂದ, 1st class

ಅಂತೂ ಅಲ್ಲ ಎಂದುಕೊಂಡು ಇಳಿದೆ, ಇರಲಿ ಮುನಸೀಫ್ ಆದಮೇಲೆ ತೋರಿಸ್ತೀನಿ ಅಂತ. ನಡೆದು ಮುಂದೆ ಹೋಗುತ್ತಿರುವಷ್ಟರಲ್ಲಿ ಆ ಕ್ಲೀನರು "ಓಹೋ, ಹೊರಟಲ್ಲಯ್ಯಾ, ಬೆಂಗಳೂರಿಗೇ; ದಬ್ಬಯ್ಯಾ ದಬ್ಬು. ಇಲ್ದಿದ್ರೆ ಬಿಟ್ಟುಹೋಗ್ತೀವಿ" ಎಂದ. ಯತ್ನವಿಲ್ಲದೆ ನಾನೂ ಸೇರಿಕೊಂಡೆ ದಬ್ಬುವವರ ದಳಕ್ಕೆ. ಸೋನೆ ಮಳೆ ಪ್ರಾರಂಭವಾಗಿ ಜೋರಾಗೇ ಬರಲು ಷುರು ಆಯ್ತು. ನಾವೋ ಒಂದು ಫರ್ಲಾಂಗ್ ದಬ್ಬು, ಒಂದು ಫರ್ಲಾಂಗ್ ಹತ್ತು, ರಸ್ತೆಯೋ ಕೆಸರು. ನಮ್ಮ ಬಟ್ಟೆಯೋ ಕಾವಿ ಕೆಂಪು. ಹೀಗಾಗಿ ರಾತ್ರೆಯೆಲ್ಲಾ ಮಳೆಯಲ್ಲಿ ನೆನೆಯುತ್ತಾ, ಬಸ್ಸು ಮೈಲಿಗೊಂದು ಸಲ ರಿಪೇರಿ ಆಗುತ್ತಾ, ಅದನ್ನು ನಾವು ದಬ್ಬುತ್ತಾ, ಹತ್ತುತ್ತಾ, ಬೆಳಗ್ಗೆ ಆರು ಗಂಟೆ ಆಯ್ತು ನಾವು ಸುಬ್ಬೂನ ಕಾರ್ಖಾನೆ ಹತ್ತಿರ ಬಂದಾಗ ಸರಿ ಅಲ್ಲಿ ಬಸ್ಸು ನಿಲ್ಲಿಸಿ, ಹಸರು ಟ್ರಂಕ್ ಕೆಳಗಿಳಿಸಿಕೊಂಡು ಹೊರಟೆ ಕಾರ್ಖಾನೆ ಕಾಂಪೌಂಡಿನಲ್ಲಿದ್ದ ಸುಬ್ಬುವಿನ ರೂಮಿಗೆ. ಅವನ ರೂಮು ಹುಡುಕಿ ಬೀಗ ತೆಗೆದು ದೀಪ ಹಾಕಿ, ಟ್ರಂಕನ್ನ ಮೂಲೇಲಿಟ್ಟು, ಕನ್ನಡಿಯಲ್ಲಿ ನೋಡುಕೊಳ್ಳುತ್ತೀನೆ, ಮುಖವೆಲ್ಲಾ ಕೆಸರು ; ತಲೆಯೆಲ್ಲಾ ಕೆದರು ; ಬಟ್ಟೆಯೆಲ್ಲಾ ಕೆಂಪು. ನಲ್ಲಿ ಹತ್ತಿರ ಹೋಗಿ, ಮೈಮೇಲಿದ್ದ ಬಟ್ಟೇನ ಚೆನ್ನಾಗಿ ನೀರಲ್ಲಿ ಜಾಲಾಡಿ, ಸ್ನಾನಮಾಡಿ ಬಂದು, ಟ್ರಂಕ್‌ನಲ್ಲಿದ್ದ ಒಣಗಿದ ಬಟ್ಟೆಗಳನ್ನು ಹಾಕಿಕೊಳ್ಳೋಣವೆಂದು, ನಲ್ಲಿಯ ಹತ್ತಿರ ಹೋಗಿ, ಮೈಮೇಲಿದ್ದ ಬಟ್ಟೆಗಳನ್ನೆಲ್ಲಾ ಚೆನ್ನಾಗಿ ತೊಯಿಸಿ, ಜಾಲಾಡಿ, ಹಿಂಡಿಟ್ಟು, ಸ್ನಾನಮಾಡಿ, ಟವಲಿನಿಂದ ಒರಿಸಿಕೊಂಡು, ಒದ್ದೆ ಪಂಚೇನೆ ಉಟ್ಟುಕೊಂಡು ರೂಮಿಗೆ ಬಂದು ನೋಡ್ತೀನೆ ಏಳುಗಂಟೆ ಆಗಿತ್ತು. ಇನ್ನು ಅರ್ಧಗಂಟೆ ಉಳಿದಿತ್ತು, ನನ್ನ Interviewಗೆ. ಸರಸರ ಬಟ್ಟೆ ಹಾಕಿಕೊಂಡು ಸೈಕಲ್ ಮೇಲೆ ಹೋಗೋಣ ಅಂತ ಜನಿವಾರದಲ್ಲಿದ್ದ ಬೀಗದಕೈಯಿಂದ ಟ್ರಂಕಿನ ಬೀಗ ತೆಗೆಯಲಿಕ್ಕೆ ಹೋದರೆ— ಸಾದಾ ಮಿಲ್ಲರ್‌ಬೀಗ ಹಾಕಿದ್ದು, ಹತ್ತಾಣೆಗೊಂದು ಸಿಗುತ್ತಲ್ಲಾ ಎಲ್ಲರಂಗಡಿಯಲ್ಲೂ -- ಒಂದೆರಡು ಸಲ ತೊಂದ್ರೆ ಕೊಟ್ಟು ನಂತರ ಬಾಯಿಬಿಡ್ತು ಬೀಗ. ಆಮೇಲೆ ಟ್ರಂಕಿನ ಬಾಗಿಲು ತೆಗೆದುನೋಡ್ತೀನೆ, ಟ್ರಂಕಿನ ತುಂಬ, ರೇಷ್ಮೆಸೀರೆ, ಜಾಕಿಟ್ಟು, ಬಾಡಿ, ಪೌಡರ್‌ಡಬ್ಬಿ, ಸ್ನೋ ಬಾಟಲ್, ದಂತದ ಬಾಚಣಿಗೆ, ಕನ್ನಡಿ—ನನ್ನ ಬಟ್ಟೆಯೋ ಒದ್ದೆಮುದ್ದೆ—ಒಂದು ಪಂಚೆ, ಟವಲು, ಜಂಪರ್ ಕೆಂಪು ಬಣ್ಣಬೇರೆ—ನಾನೋ ಯಶವಂತಪುರದಾಚೆ ಮೂರು ಮೂಲಿ ದೂರ—ಗಂಟೆಯೋ ಏಳಾಗಿ ಏಳು ನಿಮಿಷ—ಹಾಳು ಬಸ್ಸಿಂದ ಇಳಿಯುವಾಗ ಯಾರದೋ ಹೆಂಗಸರ ಹಸುರು ಟ್ರಂಕ್ ಇಳಿಸಿಕೊಂಡು ಬಂದುಬಿಟ್ಟಿದ್ದೆ. ಅವತ್ತಿಂದಾ ನೋಡಿ ಹಾಳಾದ್ದು ಹಸುರು ಟ್ರಂಕ್ ಅಂದ್ರೆ ಹುಚ್ಚು ಹಿಡಿಯುತ್ತೆ."

—ರಾಮು.

—o—

# ಬಿಸಾಕಿದ ಬಿರುದು

ಆಗಸ್ಟ್ ೧೫ ರಂದು, ಬ್ರಿಟಿಷರು ನಮ್ಮವರಿಗೆ ದಯಪಾಲಿಸಿದ್ದ ಬಿಂಕದ ಬಿಲ್ಲೆಗಳೆಲ್ಲ ಅಪಮಾನದ ಚಿಹ್ನೆಗಳಾದುವು. ಕೇವಲ ವಿದ್ವತ್ತಿಗಾಗಿಯೇ ಅದನ್ನು ಪಡೆದಿದ್ದ ಶ್ರೀ ಸರ್ವೆಪಲ್ಲಿ ರಾಧಾಕೃಷ್ಣನ್‌ರವರು ಕೂಡ, ಕತ್ತನ್ನು ಸುತ್ತಿದ ಹಾವನ್ನು ತೆಗೆದು ಬಿಸುಡುವಂತೆ, ತಮ್ಮ ಸರ್ ಪದವಿಯನ್ನು ಅಂದು ಕಳಚಿ ಎಸೆದರು. ಈಗ ಎಲ್ಲೆಲ್ಲೂ ಈ ಪದಕ ಸನ್ಯಾಸವೇ. ಹಿಂದೂ-ಮುಸ್ಲಿಂ ಎಂಬ ಭೇದವಿಲ್ಲದೆ, ಬಂಗಾಳಿ – ಬಿಹಾರಿ, ಮದರಾಸಿ – ಮಧ್ಯವಾಸಿ ಎಂಬ ಭೇದ ವಿಲ್ಲದೆ, ಭಾರತೀಯರೆಲ್ಲರೂ ಏಕ ಕಂಠದಿಂದ ಇಂದು ಅಸಹ್ಯಪಡುವುದು ಯಾವು ದಕ್ಕೆ – ಎಂದರೆ, ಬ್ರಿಟಿಷ್ ಬಿರುದುಗಳಿಗೆ ! ಸರ್‌ನಿಂದ ಹಿಡಿದು ಕೈಸರ್‌ನವರೆಗೂ ಹರಳುಗಳಿಂದ ಮಾಡಿದ್ದ ಬಾವಲಿಗಳಿಂದ ಹಿಡಿದು ಕೇವಲ ಕಂಚಿನ ತಗಡುಗಳ ವರೆಗೂ ಪರಂಗಿಯುವರು ಲೀಲಾಜಾಲವಾಗಿ ಹಂಚಿದ್ದ ಬಿರದುಗಳೆಲ್ಲ, ಬಿರುಗಾಳಿಗೆ ಸಿಕ್ಕ ತರಗೆಲೆಗಳಂತೆ, ಈಗ, ವೀರಭಾರತ ಮಕ್ಕಳ ಕೆಚ್ಚೆದೆಗಳಿಂದ ಉದುರುತ್ತಿವೆ.

ಮನಸ್ಸಿಲ್ಲದ ಮನಸ್ಸಿನಿಂದ ಅನೇಕರು ಈ ದ್ವೇಷಭೂಷಣವನ್ನು ತ್ಯಜಿಸು ತ್ತಿದಾರೆ. ಯಾರ ಸಂತೋಷಕ್ಕೆಂದು ಇನ್ನು ಅದನ್ನು ಧರಿಸಬೇಕು. ಪಾಪ ! ಎಷ್ಟು ಜನರೆದುರು ಬೆನ್ನು ಬಾಗಿಸಿ, ಡೊಂಕು ಸಲಾಮು ಹೊಡೆದು, ಎಷ್ಟು ಹಾರ ತುರಾಯಿ ಖರ್ಚುಮಾಡಿ, ಎಷ್ಟು ಔತಣಗಳನ್ನು ನಡೆಯಿಸಿ, ಕರೀಪೇಟೆಯಿಂದ ಬಂದ ಲಾಭದಲ್ಲಿ, ಕಂಬನಿ ಸುರಿಸುತ್ತ, ಎಷ್ಟು ಭಾಗವನ್ನು 'ಗಾವರ್ನರಿಕ ನಿಧಿಗಳಿಗೆ ದಾನಮಾಡಿ, ಆ ಬಿಲ್ಲೆಗಳನ್ನು ಪಡೆದಿದ್ದರೋ, ಆ ಮಹಾನುಭಾವರು ! ಭಾರತದ ಸ್ವಾತಂತ್ರ್ಯದ ಪಿಸುಮಾತನ್ನೇ ಎತ್ತದೆ ಎಷ್ಟು ಗಂಟೆಗಳ ಕಾಲ ಮಹಾ ಮಹಾ ವೇದಿಕೆಗಳ ಮೇಲೆ ಬಟ್ಲರುಗಳಂತೆ ಭಾಷಣಮಾಡಿ ಪರಂಗಿಯವರ ಮೆಚ್ಚಿಕೆ ಪಡೆ ದಿದ್ದರೊ ? ತಮ್ಮ ಅಣ್ಣತಮ್ಮಂದಿರನ್ನೇ ಅವಹೇಳನಮಾಡಿ, ತಾವು ಬ್ರಿಟಿಷರ ಸೈ ಗೊಂಬೆಗಳು, ಅವರನ್ನೆಂದಿಗೂ ಕೈಬಿಡದ ಅನುಯಾಯಿಗಳು, ಎಂದು ಅನ್ನಿಸಿ ಕೊಂಡಿದ್ದರೋ ? ಸೂರ್ಯದೇವನೂ ಕೂಡ ಅಸ್ತಮಿಸಲು ಹೆದರುತ್ತಿದ್ದ ಬ್ರಿಟೀಷ್


ಸಾಮ್ರಾಜ್ಯಾಧಿಕಾರಿಗಳನ್ನು ಈ ಅರೆಬೆತ್ತಲೆ ಆಡಿನ ಹಾಲಿನವನು ಓಡಿಸುವನೆಂದು ಅವರು ಹೇಗೆ ಮನಗಾಣಬೇಕು ?

ಈಗ, . .. ಬಿರುದು ಬಾವಲಿಗಳನ್ನೆಲ್ಲ' ಬ್ರಿಟಿಷರ ಸಂಗಡಲೇ ರವಾನಿಸ ಬೇಕಾದ ಕಾಲ ಬಂದಿದೆ ಉರಿಬಿಸಿಲಲ್ಲೂ ಉಲ್ಲನ್ ಸೂಟುಗಳನ್ನು ಧರಿಸಿ ಬೆವರು ಸುರಿಸಿ ಥೇಟ್ ಆಂಗ್ಲ ರಕ್ಷಾದೀಕ್ಷಿತನಂತೆ ನುಡಿದು ನಡೆದು ಪಡೆದ ಬಿಲ್ಲೆ! ಸಾವಿರಾರು ಸಭಾಮಂದಿರಗಳಲ್ಲಿ ಅಧ್ಯಕ್ಷಪದವಿಯ ದಿಂಬಾಸನವನ್ನು ಮಾಸಲಾಗಿ ಸಿದ ಬಿಲ್ಲೆ ! ಅನಾಯಾಸವಾಗಿ ತಮ್ಮ ಪತ್ನಿಯರಿಗೆ ಎಂದೂ ಇಲ್ಲದ ಬಿರುದಿಗಿತ್ತಿ ಮರ್ಯಾದೆಯನ್ನು ಒದಗಿಸಿದ ಬಿಲ್ಲೆ ! ... ...ತ್ಯಜಿಸದೆ ಉಳಿಸಿಕೊಂಡಲ್ಲಿ, ಸ್ವತಂತ್ರ ಸಮಾಜದಲ್ಲಿ ಗಣ್ಯಸ್ಥಾನ ದೊರಕಲಾರದು, ಎಂಬ ಸನ್ನಿವೇಶ ಒದಗಿದೆ ! ತೊಟ್ಟರೆ ನಾಚಿಕೆಗೇಡು ! ಕೊಟ್ಟರೆ, ಮಾನವಾದ ಬದುಕು !

ಬ್ರಿಟಿಷರಿಗೆ ತಮ್ಮ ಕುಲಗೋತ್ರಗಳನ್ನೂ ಯೋಧವೀರರನ್ನೂ ಇಲ್ಲಿಂದ ಸುಸೂತ್ರವಾಗಿ ಸಮುದ್ರದಾಚೆ ದಡಕ್ಕೆ ಸಾಗಿಸುವ ಚಿಂತೆಯ ಜೊತೆಗೆ ಭಾರತೀಯ ರಿಗೆ ಬೇಡವಾದ ಈ ದ್ವೇಷಭೂಷಣಗಳನ್ನು ಎಲ್ಲಿಗೆ ಹೇಗೆ, ರವಾನಿಸುವುದು, ಎಂಬ ಅನಿರೀಕ್ಷಿತ ಆತಂಕ ಬೇರೆ ! ಆಗಲೇ ಅವುಗಳ ಮೂಟೆಗಳ ಭಾರ 29,356 ಟನ್‌ನಷ್ಟಾಗಿದೆ ಎಂಬ ವದಂತಿ ಇದೆ. ಮೀನ ಮೇಷ ಎಣಿಸುತ್ತ ಡೋಲಾಯ ಮಾನದಲ್ಲಿ ತೂಗಾಡುವ ನಿಧಾನಿಗಳ ಪದಕಗಳನ್ನೂ ಸೇರಿಸಿದರೆ, ಒಟ್ಟು 30 ಸಹಸ್ರ ಟನ್ ಲೋಹವಾಗುತ್ತದೆಯಂತೆ.

ಈ ಬಿಲ್ಲೆಗಳಿಗೆ ಪುನಃ ಮುಲಾಮು ಬಳಿದು ಪಾಲೀಷ್ ಹಾಕಿ, ಬ್ರಿಟೀಷರ ಇನ್ನು ಮುಂದಿನ ಸಾಮ್ರಾಜ್ಯ ಸಂಪತ್ತುಗಳ ಕೇಂದ್ರವಾದ ಆಫ್ರಿಕಾದ ನೀಗ್ರೋ ಜನರಿಗೆ ಹಂಚಿ, ಅವರ ಸಹಕಾರ ಸಹಾಯ ಸರಪರಾಜು ಸಹಾನುಬೂದಿಗಳನ್ನು ಪಡೆಯಬಹುದೆಂದು ಐ. ಸಿ ಎಸ್‌ನ ಬಿಳಿ ಮೇಧಾವಿಯೊಬ್ಬರು ಸಲಹೆ ಇತ್ತಿರುವ ರಂತೆ. ಆದರೆ, ಒಂದೇ ಒಂದು ಅಡಚಣೆ. ಅವನ್ನು ಚುಚ್ಚಿಕೊಂಡು ಮೆರೆಯಲು ಮೊದಲು ಆ ನೀಗ್ರೋ ಪ್ರಮುಖರು ಬಟ್ಟೆ ಧರಿಸುವ ಪದ್ಧತಿಯನ್ನು ಅವಲಂಬಿಸ ಬೇಕಾಗಿದೆ........

—ಶೇಣೈ.



# "ಕಂಬನಿ"

"ವಂಗ ಭಂಗ" -"ನವಭಾರತದ ಕಲ್ಪದ್ರುಮ" ಇತ್ಯಾದಿ ವ್ಯಂಗ್ಯ ಚಿತ್ರಗಳನ್ನು ಅಣಿಯಾಗಿ ಬರೆದ 'ಅದ್ರಿ'ಯು ಆಗಸ್ಟ್ ಇಪ್ಪತ್ತೈದನೆಯ ಸೋಮವಾರ ದಿವಂಗತನಾದನೆಂದು ಹೇಳಲು ವಿಷಾದಿಸುತ್ತೇವೆ. ಸ್ವತಂತ್ರ ಭಾರತದ ನವೋದಯವನ್ನು ಆಗಸ್ಟ್ ೧೫ಕ್ಕೆ ವಿಜೃಂಭಣೆಯಿಂದ ನೆರವೇರಿಸಬೇಕೆಂದು ಅದರ ಮೊದಲ ನಾಲ್ಕುದಿನ ಭಯಂಕರ ಜ್ವರದ ತಾಪದಲ್ಲೂ ಆಸೆ ಪಡುತ್ತಿದ್ದ.' ವಿಧಿಯು ಬೇರೆ ಎಣಿಸಿತ್ತು. ಪರೀಕ್ಷೆಗಳಲ್ಲಿ ಮೊದಲ ತರಗತಿಯಲ್ಲಿ ಉತ್ತೀರ್ಣನಾಗಿ ಎಂಜನಿಯರಿಂಗ್ ಕಾಲೇಜಿನ ತನ್ನ ತರಗತಿಯಲ್ಲಿ ಮೊದಲಿಗನಾಗಿ ವ್ಯಂಗ್ಯಚಿತ್ರ ಬರೆವುದರಲ್ಲಿ ಉತ್ಸಾಹಶಾಲಿಯಾಗಿದ್ದು ಇನ್ನೂ ಇಪ್ಪತ್ತಾಗದ ವಯಸ್ಸಿನ ಪುತ್ರನನ್ನು ಕಳೆದುಕೊಂಡ ನಮ್ಮ ನಾ. ಕಸ್ತೂರಿಯವರಿಗೂ, ಅವರ ಸಹಧರ್ಮಿಣಿಗೂ, ಬಂಧು ಬಳಗದವರಿಗೂ, ಈಶ್ವರನೇ ನೆರವಾಗಿ ಧೈರ್ಯ ಕೊಡಬೇಕು. ಕಿರಿಯರು ಹಿರಿಯರಿಗೆ ಸಮಾಧಾನ ಹೇಳಲು ಸುಲಭವಲ್ಲ—ಸಾಧ್ಯವೂ ಅಲ್ಲ. ಅಂತಾಗಿ ನಾವು ದೇವರಲ್ಲಿ ಒಂದೇ ಮೊರೆಯಿಡುತ್ತೇವೆ. 'ಅದ್ರಿ'ಯ ಆತ್ಮಕ್ಕೆ ಶಾಂತಿ ದೊರಕಲಿ—ಅವನ ತಂದೆ ತಾಯಿಗಳು ಈ ಹುದುಗಲಾರದ ದುಃಖವನ್ನು ನುಂಗುವಂತಾಗಲಿ.

ಓಂ ಶಾಂತಿಃ.



ಸಂಜೆ ಹೊತ್ತಿಗೆ ಮೂರು ಮೊಳ.

# ಕುದುರೆ ಪಂದ್ಯ

ಬೆಂಗಳೂರಿನಲ್ಲಿ ಬಹಳ ದಿವಸಗಳ ಮೇಲೆ ಕುದುರೆ ಪಂದ್ಯಗಳನ್ನಿಟ್ಟಿದ್ದು ನಮ್ಮ ವೆಂಕಣ್ಣನಿಗೆ ಸಂತೋಷವೋ ಸಂತೋಷ. ನೀನೂ ಬರುತ್ತೀಯಾ ಎಂದು ನನ್ನನ್ನು ಕೇಳಿದ. 'ಕುದುರೆಯ ಬಾಲ ಯಾವುದು, ಮೂತಿ ಯಾವುದು ಎನ್ನುವುದು ಗೊತ್ತಿಲ್ಲದ ನಾನು ಬಂದು ಮಾಡುವುದೇನು' ಎಂದೆ. "ನೀನು ಬಾ, ನಾನೆಲ್ಲಾ ನೋಡಿಕೊಳ್ಳುತ್ತೇನೆ" ಎಂದ. "ಹಾಗಾದರೆ ನನ್ನದೇನೂ ಖರ್ಚಿಲ್ಲವಷ್ಟೆ ?" ಎಂದೆ. "ಅಯ್ಯೋ, ಮಂಕೆ, ಒಂದೈವತ್ತು ರೂಪಾಯಿ ಜೇಬಿನಲ್ಲಿಟ್ಟುಕೊಂಡು ಬಾ, ಅದನ್ನು ಎರಡರಷ್ಟೋ ಮೂರರಷ್ಟೋ ಮಾಡಿಕೊಡುತ್ತೇನೆ—ಅದೃಷ್ಟವಿದ್ದರೆ ಹತ್ತರಷ್ಟು ಬೇಕಾದರೂ ಆಗಬಹುದು" ಎಂದ. ನನಗೆ ಬಾಯಲ್ಲಿ ನೀರೂರಿತು. ಒಂದು ತಿಂಗಳೆಲ್ಲಾ ಮೂಗಿಗೆ ಕವಡೆ ಕಟ್ಟಿಕೊಂಡು ದುಡೀಬೇಕಾದ ದುಡ್ಡನ್ನು ಎರಡೇ ಘಂಟೆಯಲ್ಲಿ ಸಂಪಾದಿಸಿ ಬಿಡಬಹುದು ಅಂದರೆ ಯಾರಿಗೆ ತಾನೆ ಹಾಗಾಗುವುದಿಲ್ಲ? 'ಹಾಗಾದರೆ ನಾನೂ ಸೈ!' ಎಂದೆ.

ಮಾರನೇ ದಿನ ಹಾಗೆ ಹೀಗೆ ಮಾಡಿ ಒಂದರವತ್ತು ರೂಪಾಯಿ ಜತೆ ಮಾಡಿಕೊಂಡೆ. ನನ್ನಲ್ಲಿಯೇ ಇಪ್ಪತ್ತು ರೂಪಾಯಿಗಳಿದ್ದವು. ಮನೇ ಖರ್ಚಿಗೆ ಎಂದು ಕೊಟ್ಟಿದ್ದರಲ್ಲಿ ಒಂದಕ್ಕೆ ಎರಡರಷ್ಟು ಹಿಂದಕ್ಕೆ ಕೊಡುತ್ತೇನೆ ಎಂದು ಹೇಳಿ ಪುಸಲಾಯಿಸಿ ಹದಿನೈದು ರೂಪಾಯಿಗಳನ್ನು ಇಸುಕೊಂಡೆ. ಹುಡುಗರ ಪೆಟ್ಟಿಗಳನ್ನೆಲ್ಲಾ ಹುಡುಕಿ ದಕ್ಷಿಣೆ ಪುಡಿ ಕಾಸುಗಳನ್ನು ಕೂಡಿಹಾಕಿಟ್ಟುಕೊಂಡಿದ್ದನ್ನೆಲ್ಲಾ ಸೇರಿಸಿ ಐದು ರೂಪಾಯಿ ಜಮಾಯಿಸಿದೆ. ನಲವತ್ತಾಯಿತು. ವೆಂಕಣ್ಣನೇನೊ ಐವತ್ತು ಹೇಳಿದ್ದರೂ ಮೇಲೆ ಇನ್ನೊಂದು ಹತ್ತು ಇದ್ದರೇನೂ ಬಾಧಕವಿಲ್ಲ ಎಂದು ಇನ್ನಿಪ್ಪತ್ತಕ್ಕೆ ಏರ್ಪಾಟು ಮಾಡತೊಡಗಿದೆ. ನೆರಮನೆ ನಂಜುಂಡಯ್ಯನನ್ನು ಹೋಗಿ ಕೇಳಿದೆ. ಆತ "ಖಂಡಿತವಾಗಿಯೂ ಕೊಡುತ್ತಿದ್ದೆ, ನೋಡು. ಆದರೆ ನಾನೇ ಹೋಗಬೇಕೆಂದಿದ್ದೇನೆ. ಮೂವತ್ತು ರೂಪಾಯಿ ನಾನೂ ಜೊತೆ ಮಾಡಿದ್ದೇನೆ ಇನ್ನು ನಲವತ್ತಾದರೂ ಬೇಕು – ಏಳು ಪಂದ್ಯಗಳಿವೆ" ಎಂದ. ಏನು ಮಾಡುವುದು ಎಂದು ಆಲೋಚಿಸಿದೆ. ಹತ್ತಿರದಲ್ಲೇ ನಮ್ಮ ಸೋದರ ಮಾವನ ಮನೆ. ಅವನೋ ಮಹಾ ಜಿಕಟು ಮನುಷ್ಯ. ಬಡಪೆಟ್ಟಿಗೂ ಕೈ ಬಿಚ್ಚುವ ಆಸಾಮಿಯಲ್ಲ – ಆದರೂ ಹೋದೆ. ಮನೆಯಲ್ಲಿದ್ದ. "ಏನು ಬಹಳ ಅಪರೂಪವಾಗಿ ಬಂದೆ ? ಇವತ್ತೇನು ರಜವೆ ?" ಎಂದ. "ಇಲ್ಲ, ಮಾವಯ್ಯ, ರಜ ತೆಗೆದುಕೋ ಬೇಕಾಯಿತು........" ಎಂದೆ. "ಅದೇಕೆ ?" ಎಂದ. "ಮಗುವಿಗೆ ಮೈಯಲ್ಲಿ ಹುಷಾರಿಲ್ಲ" ಎಂದೆ. "ನೆನ್ನೆ ಚೆನ್ನಾಗಿತ್ತಲ್ಲ, ಏಕೆ? ಏನು ಖಾಯಿಲೆ?"

ಎಂದ. ಖಾಯಿಲೆ ಎಂದರೆ ಅವನಿಗೆ ಬಲು ಗಾಭರಿ. ನಾನು ನಿಟ್ಟುಸಿರು ಬಿಟ್ಟು "ಏನೋಪ್ಪ, ನನ್ನ ಗ್ರಹಚಾರ. ಡಾಕ್ಟರು ಡಿಫ್ತೀರಿಯಾ ಅಂದುಬಿಟ್ಟಿದಾರೆ. ಈಗಲೇ ಇಂಜಕ್ಷನ್ ಕೊಡಬೇಕಂತೆ. ಔಷಧಿ ತರಲಿಕ್ಕೆ ಹೇಳಿದಾರೆ. ಆ ಹಾಳು ಔಷಧಿಯೋ ವಿಪರೀತ ಬೆಲೆ — ಹನ್ನೆರಡು ರೂಪಾಯಿಗಳಾಗುತ್ತೆ. ಮೇಲೆ ಅವರ ಫೀಜು ಬೇರೆ. . ...ಇದ್ದ ಹಣವೆಲ್ಲಾ ಖರ್ಚುಮಾಡಿಬಿಟ್ಟಿದ್ದೇನೆ ...ನಿನ್ನ ಬಳಿ ಏನಾದರೂ ಸಿಕ್ಕುತ್ತೆಯೆ ? ಕೈ ಸಾಲ – ಒಂದು ಇಪ್ಪತ್ತು ರೂಪಾಯಿ ಆದ್ರೆ ಸಾಕು" ಎಂದೆ. ಮಾವಯ್ಯನಿಗೆ ಧರ್ಮಸಂಕಟ. ಕೈತೆರೆದು ಕೊಡುವುದಕ್ಕೆ ಇಷ್ಟವಿಲ್ಲ, ಇಂತ ಸಮಯದಲ್ಲಿ ಇಲ್ಲ ಎನ್ನುವ ಹಾಗಿಲ್ಲ. ಹಾ, ಹೂ ಎಂದು ಕೊಂಡು, ತಿಣಕಾಡಿ, ಕಡೆಗೆ ಇಪ್ಪತ್ತು ರೂಪಾಯಿ ಎಣಿಸಿಬಿಟ್ಟ. "ಮಗೂನ ಬಂದು ನೋಡುತ್ತೇನೆ" ಎಂದ. ನಾನು ಗಾಭರಿಯಿಂದ "ಅಯ್ಯೋ, ಬೇಡ, ಬೇಡ. ಡಾಕ್ಟರು ಹೇಳಿದಾರೆ, ಬಲು ಅಂಟುರೋಗ ಯಾರೂ ಹತ್ತಿರ ಬರ ಕೂಡದು ಎಂದು. ನಾನೇ ಆಗಾಗ್ಯೆ ಬಂದು ದೇಹಸ್ಥಿತಿ ತಿಳಿಸುತ್ತೇನೆ" ಎಂದು ಹೇಳಿ ಹೊರಟು ಬಂದೆ.

ವೆಂಕಣ್ಣ ಒಂದು ಘಂಟೆ ಸಮಯಕ್ಕೆ ಸರಿಯಾಗಿ ಬಂದ. ಇನ್ನೇನು ಹೊರಡಬೇಕು ಎನ್ನುವುದರಲ್ಲಿ ದೊಡ್ಡ ಮಳೆ ಆರಂಭಿಸಿತು. "ವೆಂಕಣ್ಣ, ಏಕೋ ಶಕುನ ಚೆನ್ನಾಗಿಲ್ಲ" ಎಂದೆ. "ಒಳ್ಳೇ ಶಕುನವೇಕಣಯ್ಯಾ, ಮಳೆ ಬಂದದ್ದು ಒಳ್ಳೆ ಸುಭಿಕ್ಷ ನಮಗೆ !" ಎಂದ. ಮಳೆ ನಿಂತಮೇಲೆ ಒಂದು ಜಟಕಾದಲ್ಲಿ ಹೊರಟೆವು. "ಏನು ಸಾಬ್ರೂ, ಕುದುರೆ ಸರಿಯಾಗಿ ಹೋಗುತ್ತೋ" ಎಂದೆ. "ಅದಕ್ಕೇನು ಸಾಮಿ, ಷರತ್‌ಕಾ ಗೋಢಾ ಕರೀಕಾಜಾತಾಯ್" ಅಂದ. ಅವನು ಹಾಗೆ ಹೇಳುತ್ತಿರುವಾಗಲೇ ಎಡಕ್ಕೆ ತಿರುಗಬೇಕಾದ ಕುದುರೆ ಬಲಕ್ಕೆ ತಿರುಗಿತು ; ಸಾಬಿ ಸರಿಯಾದ ದಿಕ್ಕಿಗೆ ತಿರುಗಿಸುವುದಕ್ಕೆ ಪ್ರಯತ್ನಪಟ್ಟ ಹಾಗೆಲ್ಲಾ ಹಿಂದಿಂದಕ್ಕೇ ಸರಿಯ ತೊಡಗಿತು. ಇನ್ನೇನು ಚರಂಡಿಯಲ್ಲಿ ನಮ್ಮನ್ನು ಎತ್ತಿ ಹಾಕಿ ತಾನು ಬೀಳುವುದೋ ಎನ್ನುವಷ್ಟರಲ್ಲಿ ಏನೋ ಮನಸ್ಸುಮಾಡಿ ಸರಿಯಾದ ದಿಕ್ಕಿನಲ್ಲಿ ನಾಗಾಲೋಟ ಹಾಕಲು ಶುರು ಮಾಡಿತು. ಹೊಟ್ಟೆಯೆಲ್ಲಾ ಕಲಕಿಸಿ ಕೊಂಡು ಮೈ ಜಜ್ಜಿಸಿಕೊಂಡು ಅಂತೂ ಮೂರು ಘಂಟೆ ಹೊತ್ತಿಗೆ ಜೂಜುದಿಣ್ಣೆ ಸೇರಿದೆವು – ವೆಂಕಣ್ಣ ಏನೋ ಹಿಕ್ಮತ್ತು ಮಾಡಿ ಎರಡು ಬಿಟ್ಟಿ ಟಿಕೆಟ್ ಸಂಪಾದಿಸಿ ಕೊಂಡು ಬಂದಿದ್ದ. ಅದರ ಸಹಾಯದಿಂದ ಕ್ಯೂನಲ್ಲಿ ನಿಲ್ಲದೆ ಸರ್ರನೆ ಒಳಗೆ ನುಗ್ಗಿದೆವು. ವೆಂಕಣ್ಣ ನನ್ನ ಕೈಯಲ್ಲಿ ಒಂದು ಪುಸ್ತಕ ಕೊಟ್ಟು "ನೋಡು, ಇದರಲ್ಲಿ ಕುದುರೆಗಳ ಹೆಸರು ಎಲ್ಲಾ ಇದೆ. ನಿನಗೆ ಯಾವುದರ ಮೇಲೆ ಇಷ್ಟ ಬರುತ್ತೋ ಅದರಮೇಲೆ ಟಿಕೆಟ್ ತೆಗೆದುಕೊ" ಎಂದ. "ಅಯ್ಯಾ. ಮಹ ರಾಯಾ, ನನಗೆ ಇದರ ಗಂಧವೇ ಗೊತ್ತಿಲ್ಲ ! ನೀನು ಹೇಳಿದ ಹಾಗೆ ನಾನು ಮಾಡುತ್ತೇನೆ" ಎಂದೆ. "ನಾನೂ ಹೇಳುತ್ತೇನೆ, ನಿನ್ನ ಇಷ್ಟವನ್ನೂ ನೋಡು" ಎಂದು ಸ್ಥಳದ ಪರಿಚಯವನ್ನೆಲ್ಲಾ ಮಾಡಿಕೊಟ್ಟ.

ಮೊದಲನೆಯ ಪಂದ್ಯ ಇನ್ನೇನು ಶುರುವಾಗುವುದರಲ್ಲಿತ್ತು. ಕುದುರೆಗಳನ್ನೆಲ್ಲಾ ನೋಡಿದೆ ನಾಲ್ಕನೆ ನಂಬರಿನ ಕುದುರೆ ಮನಸ್ಸಿಗೆ ಹಿಡಿಯಿತು ಹೆಸರೂ ಒಪ್ಪಿತು "ತಮಧೀರ" ಎಂದು. "ಓಹೊ ಅದು ಕತ್ತಲಿನಲ್ಲಿ ಓಡಿಸಿದರೂ ಗೆಲ್ಲುತ್ತೆ, ಇದರಮೇಲೆ ದುಡ್ಡು ಕಟ್ಟೋಣ" ಎಂದೆ. ವೆಂಕಣ್ಣಾ "ಎಲ್ಲರೂ ಅದರಮೇಲೆಯೇ ಕಟ್ಟುತ್ತಾರೆ. ಅದು ಪ್ರಯೋಜನವಿಲ್ಲ. ಹೊಡೆದರೆ ಒಳ್ಳೇ ಕೇಪು ಹೊಡೀಬೇಕಯ್ಯ. ಆರನೇ ನಂಬರೇ ಅದಕ್ಕೆ ಸರಿ" ಎಂದ. ನೋಡಿದೆ. ಆರನೆಯ ಕುದುರೆ ಹೆಸರು "ಡಿಫರೆಂಟ್" ಎಂದು. ಇದೇನೋ ವ್ಯತ್ಯಾಸವಾಯಿತಲ್ಲ ಎಂದುಕೊಂಡು, ಎಷ್ಟಾದರೂ ನುರಿತ ಆಸಾಮಿ ವೆಂಕಣ್ಣ, ಅವನು ಹೇಳಿದ ಹಾಗೆಯೇ ಮಾಡೋಣ ಎಂದು ಆರನೇ ನಂಬರಿನಮೇಲೆ ಹತ್ತು ರೂಪಾಯಿಗೆ ಒಂದು ಟಿಕೆಟ್ ಕೊಂಡುಕೊಂಡು, ಆ ಜನಸಂದಣಿಯಲ್ಲಿ ನುಗ್ಗಿ ಕಷ್ಟಾಡಿ ಒಂದು ಜಾಗ ಹಿಡಿದು ಕೂತೆ. ಪಂದ್ಯ ಶುರುವಾಗಿ ಕುದುರೆಗಳೆಲ್ಲಾ ಓಡಿದುವು. ನೋಡಿದರೆ ನಮ್ಮ ಕುದುರೆಯೇ ಮುಂದಿತ್ತು! "ಓಹೋ, ಗಿಟ್ಟಿಸಿಬಿಟ್ಟೆವು" ಎಂದುಕೊಂಡೆ. ಇನ್ನೇನು ಕುದುರೆಗಳೆಲ್ಲಾ ಹತ್ತಿರ ಬರುವಷ್ಟರಲ್ಲಿ, ಎಲ್ಲರೂ ತಾವು ತಾವು ಆಯ್ದುಕೊಂಡಿದ್ದ ಕುದುರೆಗಳ ಹೆಸರನ್ನು ಕರೆಯುತ್ತಾ ಆವಾಹನೆ ಮಾಡತೊಡಗಿದರು. ನನಗೂ ಬಿಸಿ ಏರಿತು. "ಕಮಾನ್ ಡಿಫರೆಂಟ್!" ಎಂದು ಕೂಗ ತೊಡಗಿದೆ. ಇನ್ನೇನು ನಮ್ಮದೇ ಗೆಲ್ಲುತ್ತೋ ಎನ್ನುವಷ್ಟರಲ್ಲಿ ಬೇರೆ ಮೂರು ಕುದುರೆಗಳು ಮುಂದೆ ನುಗ್ಗಿ ನಾಗಾಲೋಟದಿಂದ ಅದರ ಮುಂದೆ ಹಾದುವು. ನಾನು "ಕಮಾನ್ ಡಿಫರೆಂಟ್!" ಎಂದು ಇನ್ನೂ ಘಟ್ಟಿಯಾಗಿ ಕೂಗಿದೆ. ನನ್ನ ಕೂಗು ಅದಕ್ಕೆ ಕೇಳಿಸಿದ ಹಾಗೇ ತೋರಲಿಲ್ಲ. ಪಂದ್ಯವು ಮುಗಿಯಿತು. ಯಾವುದು ಗೆದ್ದಿತು ಎಂದು ಎಲ್ಲರೂ ಕಾತುರತೆಯಿಂದ ನೋಡತೊಡಗಿದರು. ಸ್ವಲ್ಪ ಹೊತ್ತಿನ ಮೇಲೆ ನಾಲ್ಕನೆಯ ನಂಬರನ್ನು ಮೇಲಕ್ಕೇರಿಸಿದರು! ನಮ್ಮದು ನಾಲ್ಕನೆಯದಾಗಿದ್ದಿತು! "ನೋಡಿದೆಯಾ, ವೆಂಕಣ್ಣ, ನಾನು ಮೊದಲು ಹೇಳಿದ ಕುದುರೆಯೇ ಗೆದ್ದಿತು" ಅಂದೆ. "ನಿನಗೆ ಗೊತ್ತಿಲ್ಲವಯ್ಯಾ, ಆ ನಾಲ್ಕನೇ ನಂಬರು ಇವತ್ತೆಲ್ಲಾ ಎಷ್ಟುದುಡ್ಡು ಕೊಟ್ಟೀತು ? ನಮ್ಮ ಕುದುರೆ ಗೆದ್ದಿದ್ದರೆ ಅದರ ಎಂಟರಷ್ಟು ಬರುತ್ತಿತ್ತು . ." ಎಂದ. "ನಿಜ .. ಹೋಗಲಿ ಬಿಡು, ಮುಂದಿನ ಪಂದ್ಯದಲ್ಲಿ ಹೊಡೆಯೋಣ" ಎಂದೆ.

ಎರಡನೇ ಪಂದ್ಯದಲ್ಲಿ ವೆಂಕಣ್ಣ "ಎರಡನೇ ನಂಬರು ಚೆನ್ನಾಗಿದೆ. ಅದರ ಮೇಲೆ ತೆಗೆದುಕೊಳ್ಳೋಣ" ಎಂದ. ನೋಡಿದರೆ ಕುದುರೆಯೇನೋ ಸುಮಾರಾಗಿತ್ತು. ಹೆಸರು "ಪೀಸ್" ಎಂದು. ನೋಡುವುದಕ್ಕೂ ಶಾಂತವಾಗಿತ್ತು. ಆದರೆ ಜೂಜಿನಲ್ಲೂ, ಯುದ್ಧದಲ್ಲೂ ಶಾಂತವಾಗಿದ್ದರೇನು ಪ್ರಯೋಜನ? ಹುಮ್ಮಸು ಬೇಕು. ನೋಡಿದರೆ ಒಂದನೇ ನಂಬರಿನ ಕುದುರೆ ಒಳ್ಳೆ ಜೋರಾಗಿತ್ತು. ಹೆಸರು "ಮೆರ್ರಿಗೋಲ್ಡ್" ಎಂದು. ವೆಂಕಣ್ಣನಿಗೆ ಹೇಳಿದೆ. "ಮೊದಲನೇ ಪಂದ್ಯದಲ್ಲಿ

ನೀನು ಹೇಳಿದ್ದೇ ಬಂತು, ನಾನು ಬೇರೆ ಹೇಳಿದೆ, ಹೋಯಿತು. ಈಸಲ ನಿನ್ನ ಇಷ್ಟದಂತೆ ಮಾಡು " ಎಂದುಬಿಟ್ಟ. ಸರಿ, ನಾನು ಐದನೆಯದರ ಮೇಲೆಯೇ ದುಡ್ಡು ಕಟ್ಟಿದೆ. ಪಂದ್ಯದ ಷುರುವಿನಿಂದಲೇ " ಕಮಾರ್ನ್, ಕಮಾರ್ನ್, ಮೆರ್ರಿ ಗೋಲ್ಡ್ ಎಂದು ಕೂಗಲಾರಂಭಿಸಿದೆ. ಸುತ್ತಲೂ ಇದ್ದವರು " ಏನ್ರಿ ಇದು, ಬಂಡಿ ಕವಾನು ! ಕುದುರೆಗಳು ಹತ್ತಿರ ಬರಲಿ, ಇರ್ರೀ " ಎಂದು ಹಾಸ್ಯಮಾಡ ತೊಡಗಿದರು. ನಾನು ಅದಕ್ಕೂ ಲಕ್ಷ್ಯಮಾಡಲಿಲ್ಲ— ಕೂಗುತ್ತಲೇ ಇದ್ದೆ. ಅರಚಿ ಅರಚಿ ಗಂಟಲು ಒಣಗಿಹೋಯ್ತು. ಎರಡನೆಯ ನಂಬರು ಗೆದ್ದಿತು....

ಇಪ್ಪತ್ತು ರೂಪಾಯಿಗಳು ಅಲ್ಲಿಗೆ ಖಾಲಿಯಾಗಿತ್ತು. " ಇರಲಿ " ಎಂದು ಕೊಂಡೆ. ಮೂರನೇ ಪಂದ್ಯದಲ್ಲಿ, ವೆಂಕಣ್ಣ ಹೇಳಿದ " ನೀನು ಇಲ್ಲಿಯೇ ಇರು, ನಾನು ಸ್ವಲ್ಪ ರಹಾಯಿಸಿಕೊಂಡು ಯಾವುದು ಗೆಲ್ಲಬಹುದು ಎಂಬುದನ್ನು ತಿಳಿದು ಕೊಂಡು ಬರುತ್ತೇನೆ " ಎಂದು ಹೇಳಿ ಎದ್ದುಹೋದ. ನಾನು ಕುಳಿತು ಹಾಗೆಯೇ ನೋಡುವಲ್ಲಿ, ಪಕ್ಕದಲ್ಲಿ ಶಾಲು ಹೊದೆದುಕೊಂಡು ವಿಭೂತಿಧಾರಣದ ಶಾಸ್ತ್ರಿಗ ಳೊಬ್ಬರು ಕುಳಿತಿದ್ದರು. ಒಂದು ಕಾಗದದಮೇಲೆ ಕುಂಡಲಿ ಹಾಕಿ ಏನನ್ನೋ ಗುಣಾಕಾರ ಮಾಡುತ್ತಿದ್ದರು. " ಇದೇ ಸರಿ " ಎಂದುಕೊಂಡು " ಏನು, ಶಾಸ್ತ್ರಿ ಗಳೇ, ಈ ಪಂದ್ಯದಲ್ಲಿ ಯಾವುದು ಗೆಲ್ಲುತ್ತೆ ? " ಎಂದೆ. " ನೋಡಿ, ಜ್ಯೋತಿ ಷ್ಯದ ಪ್ರಕಾರ ಎಂಟನೇ ನಂಬರು ಖಂಡಿತ. ಲಗ್ನ ವೃಶ್ಚಿಕ, ಅಂಶವೂ ವೃಶ್ಚಿಕ. ಕುಜ ಎಂಟರಲ್ಲಿದ್ದಾನೆ. ಎಂಟು ಖಂಡಿತ " ಎಂದರು. ಜ್ಯೋತಿಷ್ಯ ಸುಳ್ಳಾ ದೀತೆ ? ನಾನು ಬೇಗ ಹೋಗಿ ಎಂಟರಮೇಲೆ ಒಂದು ಟಿಕೆಟ್ಟು ಕೊಂಡುಕೊಂಡು ಬಂದು ಕುಳಿತೆ. ವೆಂಕಣ್ಣ ಬಂದು " ಮೂರನೆಯದು ಗೆಲ್ಲಬಹುದೆಂದು ಕಾಣುತ್ತೆ. ಅದರಮೇಲೆ ದುಡ್ಡು ಕಟ್ಟು ' ಎಂದ. " ಇಲ್ಲ, ವೆಂಕಣ್ಣ ಈಗ ಇಪ್ಪತ್ತು ರೂಪಾಯಿ ಹೋಯಿತು, ಈ ಪಂದ್ಯವನ್ನು ಬಿಟ್ಟುಬಿಡುತ್ತೇನೆ—ಮುಂದಿನದರಲ್ಲಿ ನೋಡೋಣ " ಎಂದುಬಿಟ್ಟೆ. ಏಕೆಂದರೆ ಕುಂಡಲಿ ನೋಡಿ ಬಾಜಿಕಟ್ಟಿದೆ ಎಂದರೆ ನಗುತ್ತಾನೇನೋ ಎಂಬ ಭಯ. ಅವನಿಗೆ ಹಾಗೆ ಹೇಳಿದಮೇಲೆ ಘಟ್ಟಿಯಾಗಿ ಕೂಗುವುದಕ್ಕೂ ಇಲ್ಲ. ಮನಸ್ಸಿನಲ್ಲೇ " ಕಮಾರ್ನ್ ಎಂಟು, ಕಮಾರ್ನ್ ಎಂಟು " ಎಂದು ಜಪಿಸಹತ್ತಿದೆ . . ಎಂಟನೆಯ ನಂಬರಿನ ಕುದುರೆಯು ನಿಜವಾಗಿಯೂ. ಎಂಟನೆಯದೇ ಆಯಿತು....—ಓಡಿದ ಎಂಟು ಕುದುರೆಗಳಲ್ಲಿ.... ..ಮೂರನೆಯದೇ ಗೆದ್ದಿತು. ವೆಂಕಣ್ಣ " ನಾನು ಹೇಳಿದೆ .. ನಿನಗೇ ಅದೃಷ್ಟವಿಲ್ಲ....... ನಾನೇನು ಮಾಡಲಿ " ಎಂದು ತಾನು ತೆಗೆದುಕೊಂಡಿದ್ದ ಟಿಕೆಟ್ಟನ್ನು ಕೊಟ್ಟು ದುಡ್ಡುತರಲು ಹೋದ. ಶಾಸ್ತ್ರಿಗಳೂ ಬೆಪ್ಪಾಗಿದ್ದರು........

ನಾಲ್ಕನೇ ಪಂದ್ಯ. ಟಿಕೆಟ್ಟು ಕೊಳ್ಳುವ ಸ್ಥಳದಲ್ಲಿ ಆಕಡೆ ಈಕಡೆ ನೋಡುತ್ತಾ ಯಾವುದರಮೇಲೆ ತೆಗೆಯೋಣ ಎಂದು ಯೋಚಿಸುತ್ತಾ ನಿಂತಿದ್ದೆ. ಯಾರೋ

ಬಂದು ಭುಜ ತಟ್ಟಿದರು. "ಓಹೋ, ಇದೇನಯ್ಯಾ, ನೀನು ಇಲ್ಲಿ! ಆಶ್ಚರ್ಯ! ಎಂದರು. ನೋಡಿದರೆ ನನ್ನ ಮತ್ತೊಬ್ಬ ಸ್ನೇಹಿತ. "ಆಶ್ಚರ್ಯವೇನು ?" ಎಂದೆ. "ಆಶ್ಚರ್ಯವೇ, ನೀನು ಬರುವುದು ಎಂದರೆ. ಒಂದು ಆಟಂ ಬಾಂಬು ಬಿದ್ದರೂ ಅಷ್ಟು ಆಶ್ಚರ್ಯವಿಲ್ಲ" ಎಂದು ಹೇಳಿ ಹೊರಟುಹೋದ. "ಆಟಂ ಬಾಂಬಂತೆ, ಆಟಂ ಬಾಂಬ್! ಇವನ ತಲೆ – ಅದು ಬಿದ್ದಮೇಲೆ ಆಶ್ಚರ್ಯಪಡುವುದಕ್ಕೆ ಇವನೆಲ್ಲಿರುತ್ತಾನೆ" ಎಂದುಕೊಂಡೆ. ಹಾಗೆಯೇ ಜೂಜಿನ ಪುಸ್ತಕ ನೋಡುತ್ತಿರಬೇಕಾದರೆ ಕಣ್ಣಿಗೆ ಬಿತ್ತು "ಆಟಂ ಬಾಂಬ್" ಎಂಬ ಕುದುರೆ–ಈ ಪಂದ್ಯದಲ್ಲಿ ಓಡುತ್ತಿತ್ತು! ಇದೇನೋ ಕಾಕತಾಳನ್ಯಾಯ ಎಂದು ಅದರಮೇಲೆಯೇ ಒಂದು ಟಿಕೆಟ್ಟು ಕೊಂಡುಕೊಂಡು ಹೋಗಿ ಕುಳಿತೆ. ಕುದುರೆಗಳೆಲ್ಲಾ ಓಡುವುದಕ್ಕೆ ಸಾಲುಗಟ್ಟಿ ನಿಲ್ಲುವುದರಲ್ಲಿದ್ದವು. ಒಂದು ಮಾತ್ರ ಬಹಳ ತಂಟೆ ಮಾಡುತ್ತಿತ್ತು. ಪಕ್ಕದಲ್ಲಿದ್ದವರನ್ನ ಯಾವುದದು ಕುದುರೆ ಎಂದು ಕೇಳಿದೆ. ಅವರು ಬೈನಾಕ್ಯುಲರ್ಸ್‌ನಲ್ಲಿ ನೋಡಿ "ಆಟಂ ಬಾಂಬ್ ಇದ್ದಹಾಗೆ ಇದೆ" ಎಂದರು. ಬಹಳ ಹುರುಪಿನಲ್ಲಿದೆ, ಖಂಡಿತವಾಗಿಯೂ ಗೆಲ್ಲುತ್ತೆ ಅಂದುಕೊಂಡೆ. ಎಷ್ಟುಹೊತ್ತಾದರೂ ಅದಕ್ಕೆ ಹುರುಪು ಜಾಸ್ತಿಯಾಗುತ್ತಿತ್ತೇ ಹೊರತು, ಸಾಲಿಗೇನೋ ಅದು ಬಂದು ನಿಲ್ಲಲೇ ಇಲ್ಲ. ಕೊನೆಗೆ ಮಿಕ್ಕ ಕುದುರೆಗಳಿಗೆಲ್ಲಾ ಬಾಲ ತೋರಿಸಿ, ಹಿಂತಿರುಗಿಕೊಂಡು ದೌಡಾಯಿಸಿ ಕಾಂಪೌಂಡು ಗೋಡೆ ಹಾರಿ ಊರಿನೊಳಕ್ಕೆ ಅದೃಶ್ಯವಾಯಿತು. ಅದನ್ನು ಆ ರಾತ್ರಿ ಕಂಡುಹಿಡಿದು ಎಳೆದುಕೊಂಡು ಹೋಗಿ ಕಟ್ಟಿಹಾಕಿದರಂತೆ. ಅಂತೂ ನನ್ನ ತಲೆಯಮೇಲೆ ಬಿದ್ದಹಾಗಾಯಿತು ಆಟಂ ಬಾಂಬ್!

ನಲವತ್ತು ರೂಪಾಯಿ ಚೊಕ್ಕಟ. ಮನಸ್ಸಿಗೆ ಬಹಳ ಬೇಜಾರಾಯಿತು. ಮುಂದಿನೆರಡು ಪಂದ್ಯಗಳಲ್ಲೂ ಸುಮ್ಮನೆ ಕುಳಿತು ಬಿಟ್ಟೆ, ಪಕ್ಕದಲ್ಲಿದ್ದ ಕುಂಡಲಿ ಶಾಸ್ತ್ರಿಗಳು ಹೀಗೆ ಲೆಕ್ಕ ಹಾಕಿ ಆ ಎರಡು ಪಂದ್ಯಗಳಲ್ಲಿಯೂ ಗೆದ್ದ ಕುದುರೆಗಳನ್ನು ಹಿಡಿದೇ ಹಿಡಿದರು. ಕೊನೆಯ ಪಂದ್ಯ ಬಂತು. ಹಾಗೇ ಪೆಚ್ಚು ಮುಖ ಹಾಕಿಕೊಂಡು ನಿಂತಿದ್ದಾಗ ಉದ್ದವಾದ ನಿಲುವಂಗಿ, ತಲೆಗೆ ಬುರುಕಿ, ತಲೇಸುತ್ತಲೂ ಕರಿ ಹಗ್ಗ ಕಟ್ಟಿದ್ದ ಅರಬ್ಬಿಯವನೊಬ್ಬನು ಬಂದು "ಕ್ಯಾ ಲೇತಾ ಸಾಬ್" ಎನ್ನುತ್ತಾ ಕಿವಿಯಲ್ಲಿ "ಬಾರಾ ನಂಬರ್ ಲೇವ್, ಜೀತೇಗಾ" ಎಂದನು. ನಾನು ನೋಡಿದೆ. ಇವನು ಅರಬ್ಬಿಯವನು. ಪಂದ್ಯವೂ ಅರಬ್ಬೀ ಕುದುರೆಗಳ ಪಂದ್ಯ. ಇವನಿಗೇನೋ ಗೊತ್ತಿರಬಹುದು ಎಂದು ನಿರ್ಧರಿಸಿ ಒಂದೇ ಏಟಿನಲ್ಲಿ ಗೆದ್ದುಬಿಡೋಣ ಎಂಬ ದುರಾಶೆಯಿಂದ ಇದ್ದ ಇಪ್ಪತ್ತು ರೂಪಾಯಿಗಳನ್ನು ಹನ್ನೆರಡನೇ ನಂಬರಿಗೆ ಕಟ್ಟಿದೆ, ಅರಬ್ಬಿಯವನು "ಬಿಲ್‌ಕುಲ್ ಜೀತೇಗಾ, ಹಮ್ಕು ಮಾಲುಮ್.... ಜೀಯೇತೋ ದಸ್ ರೂಪಾಯ್ ದೇನಾ, ನಹೀತೋ ಹಮ್ ದೇತಾಹೈ" ಎಂದ. ಆಗಲಿ ಎಂದು ಒಪ್ಪಿಕೊಂಡೆ.

ಸರಿ, ಹನ್ನೆರಡನೇ ನಂಬರನ್ನು "ಕಮಾನ್, ಕಮಾನ್" ಎಂದು ಗಂಟಲಿನಲ್ಲಿ ಇನ್ನು ಸ್ವರ ಹೊರಡುವುದಿಲ್ಲ ಎನ್ನುವವರೆಗೂ ಕೂಗಿದೆ.......ಫಲಿತಾಂಶ ಹೇಳ

ಬೇಕಾದ ಅವಶ್ಯಕತೆಯಿಲ್ಲ. ಅದುವರೆಗೂ ಪಕ್ಕದಲ್ಲಿಯೇ ಅಂಟಿಕೊಂಡಿದ್ದ ಅರಬ್ಬಿಯವನು ಬೇರೆ ಕುದುರೆ ಗೆದ್ದದ್ದನ್ನು ನೋಡುತ್ತಲೇ ಪರಾರಿ........


ಜೋಲುಮುಖ ಹಾಕಿಕೊಂಡು ಮನೆಗೆ ಹೋಗುವಾಗ "ವೆಂಕಣ್ಣ, ಈ ಜೂಜು ತುಂಬಾ ಕೆಟ್ಟದ್ದು. ಇದನ್ನು ನಿಲ್ಲಿಸಿಬಿಡಬೇಕು........ಸ್ವತಂತ್ರ ಬಂತು. ಇನ್ನುಮೇಲೆ ಖಂಡಿತ ಇದಕ್ಕೆ ಮುಟ್ಟುಕೋಲು ಹಾಕಬೇಕು" ಎಂದೆ.

ಅವನು "ಹೋಗೋ ಹುಚ್ಚ, ಈ ಜೂಜಿಲ್ಲದಿದ್ದರೆ ಮತ್ತೊಂದು ತರದ ಜೂಜಿರುತ್ತೆ. ಸಾವಿರಾರು ವರ್ಷಗಳಿಂದ ಜೂಜಾಡುವುದು ನಮ್ಮ ರಕ್ತದಲ್ಲಿ ಸೇರಿ ಬಂದುಬಿಟ್ಟಿದೆ.... ...ನಳನನ್ನು ಜ್ಞಾಪಿಸಿಕೊ- -ರಾಜ್ಯವನ್ನೇ ಒತ್ತೆಯಿಟ್ಟ, ಜೂಜಿನಲ್ಲಿ! ಧರ್ಮರಾಯ ರಾಜ್ಯವನ್ನಲ್ಲದೆ ದ್ರೌಪತಿಯನ್ನೂ ಒತ್ತೆ ಇಟ್ಟುಬಿಟ್ಟಿದ್ದ! ಇದು ನಮಗೆ ತಪ್ಪಿದ್ದಲ್ಲ..ಹಾಗಿಲ್ಲದಿದ್ದರೆ ನೀನೇಕೆ ನಾನು ಕರೆದಾಕ್ಷಣ ಸುಳ್ಳೆಲ್ಲಾ ಹೇಳಿ ದುಡ್ಡು ಜಮಾಯಿಸಿಕೊಂಡುಬರುತ್ತಿದ್ದೆ? ಇವತ್ತು ನಿನಗೆ ಅದೃಷ್ಟವಿಲ್ಲ ಎಂದು ಹೇಳು. ಗೆದ್ದಿದ್ದರೆ ಬೇರೆ ರೀತಿ ಹಾಡುತ್ತಿದ್ದೆ" ಎಂದುಬಿಟ್ಟ.

ಇದಕ್ಕೆ ನಾನೇನೂ ಉತ್ತರ ಕೊಡುವ ಹಾಗಿರಲಿಲ್ಲ. 'ಇನ್ನುಮೇಲೆ ಖಂಡಿತ ಅಲ್ಲಿ ಕಾಲಿಡುವುದಿಲ್ಲ' ಎಂದು ಹೇಳಿದೆ.

ಆದರೆ ಮನಸ್ಸಿನಲ್ಲೇನೋ "ಇರಲಿ, ಮುಂದಿನ ಶನಿವಾರ ನೋಡಿಕೊಳ್ಳೋಣ" ಅಂದುಕೊಂಡೆ.

—ಬೀರಣ್ಣ.



ಈ ಮನೇಲಿ ಒಂದು ಸುಖ ನೋಡು! ರತ್ನಾ
ಕೂತಲ್ಲಿ ಊಟ ಮಾಡಬಹುದು. ಉಂಡಲ್ಲಿ ಮಲಗಬಹುದು.

# ಯಸ್. ಓ. ಯಸ್.

ಕೊರವಂಜಿ ಸಂಪಾದಕರ ಸಮಕ್ಷಮಕ್ಕೆ. ಬರಹಗಾರನು ಮಾಡುವ ಯಸ್. ಓ. ಯಸ್.

ತಮ್ಮ ಪತ್ರಿಕೆಯನ್ನು ಅನೇಕ ತಿಂಗಳುಗಳಿಂದಲೂ ಪಕ್ಕದ ಮನೆಯವರಿಂದ ತೆಗೆದುಕೊಂಡು ಓದುತ್ತಿದ್ದೇನೆ. ಯಾವ ಸಂಚಿಕೆಯನ್ನು ನೋಡಿದರೂ ಕುಹಕಗಳು, ತಮಾಷೆಗಳು ಇವೇ ಕಂಡು ಬರುತ್ತವೆ. ಎಂದಮೇಲೆ ನೀವು ನಮ್ಮ ದೇಶದಲ್ಲಿ ಒದಗಿರುವ ಮತ್ತು ಒದಗಲಿರುವ ಮುಖ್ಯವಾದ ಪ್ರಶ್ನೆಗಳಿಗೆ ಗಮನವನ್ನೇ ಕೊಡುತ್ತಿಲ್ಲವೆಂದು ತೋರುತ್ತದೆ. ಕೇವಲ ಕುಚೋದ್ಯದಲ್ಲಿಯೇ ಕಾಲ ಮತ್ತು ಕಾಗದ ಹರಣಮಾಡದೆ ದೇಶದ ಏಳಿಗೆಗೆ ಬೇಕಾದ ವಿಚಾರಗಳನ್ನು ಪ್ರಕಟಿಸಿ ತನ್ಮೂಲಕ ಜನಸೇವೆಯನ್ನು ಮಾಡಿ.

ಈಗ ಸಧ್ಯದಲ್ಲಿಯೇ ಒದಗಲಿರುವ ವಿಪತ್ತೊಂದನ್ನು ನೋಡಿ. ಇನ್ನು ಕೆಲವು ಕಾಲದಲ್ಲಿಯೇ ಸರ್ಕಾರದ ಯಂತ್ರವನ್ನು ನಡೆಸುವ ಕೆಲಸಗಾರರ ಅಭಾವವು ಭಯಂಕರವಾಗಿ ತಲೆದೋರುವಂತಿದೆ.

ಈ ಸಮಸ್ಯೆಯನ್ನು ಅಂಕಿ ಅಂಶಗಳಿಂದ ನೋಡಿ.

ನಮ್ಮ ದೇಶದ ಪ್ರಜಾಸಂಖ್ಯೆ 70 ಲಕ್ಷ. ಇದರಲ್ಲಿ ಕೃಷಿಯಿಂದ ಜೀವನ ಮಾಡುವವರು 50 ಲಕ್ಷ. ಉಳಿದವರು 20 ಲಕ್ಷ. ಇದರಲ್ಲಿ ಹೆಂಗಸರು ಸುಮಾರು 10 ಲಕ್ಷ. (ಇತ್ತೀಚೆಗೆ ಹೆಂಗಸರೂ ಕೆಲಸಕ್ಕೆ ಸೇರುತ್ತಿದ್ದಾಗ್ಯೂ ಗಣನೆಗೆ ತೆಗೆದುಕೊಳ್ಳುವಷ್ಟು ಹೆಚ್ಚಾಗಿಲ್ಲ) ಇನ್ನುಳಿದ 10 ಲಕ್ಷದಲ್ಲಿ ಶಾಲಾ ವಿದ್ಯಾರ್ಥಿಗಳು,—ಸೀಟು ಸಿಕ್ಕದೇ ಇರುವವರೂ ಇದರಲ್ಲಿ ಸೇರಿದೆ—ಕೆಲಸದಿಂದ ನಿವೃತ್ತಿ ಹೊಂದಿರುವವರು ಮುಂತಾದವರನ್ನು ಬಿಟ್ಟರೆ ಉಳಿಯುವವರು ಕೇವಲ 7 ಲಕ್ಷ. ಇದರಲ್ಲಿ ಕಸುಬುದಾರರು— ಲಾಯರ್‌ಗಳು, ಇಂಜಿನಿಯರ್‌ಗಳು, ನಿಮ್ಮಂತಹ ಸಂಪಾದಕರು, ನನ್ನಂತಹ ಲೇಖಕರು, ವೈದ್ಯರು, ಅವರ ನೆರವಾಗಿ ಕ್ರಿಯೆಮಾಡಿಸುವವರು ಮುಂತಾದವರು—— ಕೊನೆಯ ಪಕ್ಷ ಮೂರು ಲಕ್ಷ. ಎಂದರೆ ೭–೩= ೪ ಲಕ್ಷ. ವ್ಯಾಪಾರಗಾರರು, ಕಂಟ್ರಾಕ್ಟರುಗಳು ಇವರನ್ನು ತೆಗೆದರೆ ಉಳಿಯುವುದು ಕೇವಲ ೧ ಲಕ್ಷ.

ಈ ಒಂದು ಲಕ್ಷವೂ ಪೂರ್ತಿಯಾಗಿ ಸರ್ಕಾರಿ ಕೆಲಸಕ್ಕೇ ಒದಗುವಂತಿಲ್ಲ. ಇದರಲ್ಲಿ ರೋಗಿಗಳು, ಐಶ್ವರ್ಯವಂತರ ಮಕ್ಕಳು ಅಥವಾ ಅಳಿಯಂದಿರು,

ಕಿವುಡರು, ಕುರುಡರು, ಮೂಗರು ಇತ್ಯಾದಿಗಳನ್ನು ಬಿಟ್ಟರೆ—ಬರೆಯುವುದಕ್ಕೇ ಕೈನಡುಗುತ್ತಿದೆ – ಈಗಲೇ ಸರ್ಕಾರದ ಯಂತ್ರವನ್ನು ಹೇಗೆ ನಡೆಸುತ್ತಿದ್ದಾರೆಯೋ ಆಶ್ಚರ್ಯ ! ಉಳಿಯುವವರು ಇಪ್ಪತ್ತೈದಕ್ಕೂ ಕಡಮೆ–ನನ್ನ ಲೆಖ್ಖದ ರೀತ್ಯಾ–

ಮೊನ್ನೆ ತಾನೆ ಏಳು ಜನಗಳನ್ನು ಕಾಂಸೆಂಬ್ಲಿಗೆ ಬೇರೆ ಕಳುಹಿಸಲು ನಿರ್ಧರಿಸಿದರಲ್ಲ ! ಆಗ ಈ ಸಮಸ್ಯೆಯ ಕಡೆ ನನ್ನ ಗಮನ ತಿರುಗಿತು ಈಗಾಗಲೇ ತೊಂದರೆಯಲ್ಲಿರುವ ನಾವು ಈ ಪ್ರಕಾರವಾಗಿ ಹೊಸ ಹೊಸ ಜಾಗಗಳಿಗೆ ಮತ್ತು ಕೆಲಸಗಳಿಗೆ ಜನಗಳನ್ನು ಒದಗಿಸುತ್ತಾ ಬಂದರೆ ನಮ್ಮ ಗತಿಯೇನು ? ಬರುತ್ತಾ ಬರುತ್ತಾ ಸರ್ಕಾರಕ್ಕೆ ಬೇಕಾಗುವವರು ಹೆಚ್ಚುತ್ತಲಿದ್ದಾರೆ ಆದ್ದರಿಂದ ಕೂಡಲೆ ಸೂಕ್ತಕಾರ್ಯಕ್ರಮಗಳನ್ನು ಕೈಕೊಳ್ಳಬೇಕು ನಾನು ಒಂದು ಉಪಾಯವನ್ನು ಇಲ್ಲಿ ಕೊಡುತ್ತೇನೆ

ಮಿಲಿಟರಿ ಇಲಾಖೆಯವರು ಆಗ್ಸಿಲರಿ ಫೋರ್ಸ್–ಎಂದರೆ ಸಂಕಟ ಬಂದಾಗ ವೆಂಕಟರಮಣನಂತಿರುವವರು—ಎಂಬುದನ್ನು ಇಟ್ಟಿರುತ್ತಾರೆ ಅದೇ ರೀತಿಯಲ್ಲಿ ನಮ್ಮ ಸರ್ಕಾರದವರೂ ಸಮಯ ಬಂದಾಗ ಉಪಯೋಗಿಸಿಕೊಳ್ಳಲು ಒಂದು ಗುಂಪನ್ನು ಬೇರೆ ಬೇರೆ ಇಲಾಖೆಗಳ ಕೆಲಸಗಳಲ್ಲಿ, ತರಪೇತುಮಾಡಿ ಇಡಬೇಕು. ಸುಮಾರಾಗಿ ಈ ಕೆಳಗೆಕಂಡಂತೆ ನಿರ್ಮಿಸಬಹುದು :

| ಹುದ್ದೆ | ಸಂಖ್ಯೆ | ವಿವರ |
|---|---|---|
| ದಿವಾನರು | 1 | (ಯಾವನಾಡಿನವರಾದರೂ ಸರಿ) |
| ಮಂತ್ರಿಗಳು | 3+3 | (ಸಾಧ್ಯವಾದ ಮಟ್ಟಿಗೆ ಸ್ವದೇಶಿಮಾಲು) |
| ತಂತ್ರಿಗಳು (ಸೆಕ್ರೆಟರಿಗಳು) | 12 | ,, |
| ಡೆಪ್ಯುಟಿ ಕಮಿಷನರ್ ದರ್ಜೆಯವರು | 24 | ,, |
| ಅಸಿಸ್ಟೆಂಟ್ ಕಮಿಷನರ್ ,, | 48 ಡಜನ್ | (ಶುದ್ಧ ಸ್ವದೇಶಿ) |
| ಅಮಲ್ದಾರ್ ದರ್ಜೆಯವರು | 96 ,, | ,, |
| ಗುಮಾಸ್ತೆಗೂ, ಅಮಲ್ದಾರರಿಗೂ ಮಧ್ಯೆ ಇರುವವರು (ಉ. ಗುಮಾಲ್ದಾರ್) | 192 ,, | ,, |
| ಗುಮಾಸ್ತರು | 20 ಶತಮಾನ. | ತಮಿಳರಿಗೂ ಮಳೆಯಾಳದವರಿಗೂ ಸದವಕಾಶವುಂಟು |
| ಜವಾನರು ಮುಂತಾದ ಇತರೇ ನೌಕರರು | 30 ,, | ಕುಣಿಗಲು, ನಾಗಮಂಗಲದವರಿಗೆ ಪ್ರಾಶಸ್ತ್ಯ |


ಇದನ್ನೇ ಅಂಗೀಕರಿಸಬೇಕೆಂಬುದು ನನ್ನ ಮತವಲ್ಲ. ಇದರಿಂದ ಪ್ರಾಜ್ಞರ ದೃಷ್ಟಿಯು ಈ ಸಮಸ್ಯೆಯ ಕಡೆ ತಿರುಗಿ ಆ ಮೂಲಕ ಉತ್ತಮ ಸಲಹೆಗಳು ಬರಲೆಂಬುದೇ ನನ್ನ ಆಶೆ.

ಆದುದರಿಂದ ಸ್ವಾಮಿ, ಈ ಕಾಗದವನ್ನು ಪ್ರಕಟಿಸಿ, ತಮ್ಮ ಸಲಹೆಗಳನ್ನೂ ಸೇರಿಸಿ ದೇಶಕ್ಕೆ ಬರಲಿರುವ ವಿಪತ್ತನ್ನು ಪರಿಹರಿಸಬೇಕೆಂದು ಕೋರುವ,

ಇತಿ ತಮ್ಮಂತೆಯೇ ಬರೆಯುವ ನಿರುದ್ಯೋಗಿ,

—ಎಸ್. ವಿ.

—o—



ಏನವ್ವಾ—ನಿನ್ನ ಗಂಡ ಪೋರ್ಟರ್ ಕೆಲಸಕ್ಕೆ ಸೇರಿಕೊಂಡನಂತಲ್ಲಾ —ಹೌದಾ !

ಹೌದವ್ವಾ—ಇರುಕ್ಕೆ ಈ ಮನೆಯಾದರೂ ಸಿಕ್ಕುತ್ತಲ್ಲಾ ಅಂತ ಸೇರಿಕೊಂಡ—

# ಮೈಗಳ್ಳ

—o—

ಅಂದರೆ ಸೋಮಾರಿಯೇನಲ್ಲ. ಸೋಮಾರಿ ಶುದ್ಧ ಅಪ್ರಯೋಜಕ. ಅವನಿಂದ ತನಗೂ ಸುಖವಿಲ್ಲ. ಪ್ರಪಂಚಕ್ಕೂ ನಷ್ಟವಿಲ್ಲ. ಅವನಿಂದ ಯಾವದೇ ಕೆಲಸವೂ ನಿಲ್ಲುವುದಿಲ್ಲ. ತನಗೆ ಮಾಡುವುದಕ್ಕೂ ಕೆಲಸವಿಲ್ಲದೆ, ಕೆಲಸದಲ್ಲಿಯೂ ಆಸಕ್ತಿ ಇಲ್ಲದೆ ಮೂಲೇಲಿ ಅಫೀಮು ತಿಂದವನ ಹಾಗೆ ಬಿದ್ದಿರೋ ಸೋಮಾರಿ ತನದಲ್ಲಿ ಹೆಚ್ಚೇನು ?

ನಾನು ಮೈಗಳ್ಳ. ನನಗೆ ವಿಪರೀತ ಕೆಲಸ. ನನಗೂ ಕೆಲಸದಮೇಲೆ ಆಸೆ. ಅದನ್ನು ಮುಗಿಸುವುದಕ್ಕೇ ನನಗೆ ಮನಸ್ಸಿಲ್ಲ. ಈಗ ನನ್ನ ಹತ್ತಿರ ಬಿದ್ದಿರೋ ಕೆಲಸಗಳಲ್ಲಿ ಎಷ್ಟೋ ಕೆಲಸವನ್ನು ಎಂದೋ ಮುಗಿಸಿರಬೇಕಾಗಿತ್ತು. ಎಷ್ಟೋ ಕೆಲಸವನ್ನು ನಾನು ತೆಗೆದು ಮೂಸಿಕೂಡ ನೋಡಿಲ್ಲ. ನನಗೆ ಕೆಲಸವಿದ್ದಷ್ಟೂ ಆನಂದ. ಎಷ್ಟಾದರೂ ಶೇಖರಿಸಬಲ್ಲೆ. ಮತ್ಯಾರಾದರೂ ಕೆಲಸಮಾಡುತ್ತಿದ್ದರೆ ಬೇಜಾರಿಲ್ಲದೆ ನೋಡುತ್ತಿರಬಲ್ಲೆ. ಅವರಮೇಲೆ ಉಸ್ತುವಾರಿ ನೋಡಿಕೊಳ್ಳಬಲ್ಲೆ. ನಾನೊಂದುವೇಳೆ ಮೈಗಳ್ಳನಾಗಿಲ್ಲದ್ದರೆ ಈ ಪ್ರಪಂಚವೇ ಬದಲಾಯಿಸುತ್ತಿತ್ತೋ ಏನೋ ? ನಾನೂ ಒಬ್ಬ ಹಿಟ್ಲರ್ರೋ, ನೇತಾಜೀನೋ ಆಗುತ್ತಿದ್ದೆನೋ ಏನೋ ? ಆಗ ನಿಮಗೂ ನೆಮ್ಮದಿಯಾಗಿರುತ್ತಿತ್ತು—ಇದನ್ನು ಬರೆಯುವುದಕ್ಕೆ ನನಗೆ ಪುರುಸೊತ್ತಿರುತ್ತಿರಲಿಲ್ಲ. ನಮ್ಮಪ್ಪ ನನ್ನ ಸ್ಕೂಲಿಗೆ ಕಳುಹಿಸಿದ ಪ್ರಕಾರ ನನ್ನ ಹದಿನೆಂಟನೇ ವಯಸ್ಸಿಗೆ ನನಗೆ ಅಸಿಸ್ಟೆಂಟ್ ಕಮಿಷನರ್ ಗಿರಿ ಬರಬೇಕಾಗಿತ್ತು. ಇದು ನಮ್ಮ ಮನೆತನಕ್ಕೆ ಬಂದಿದ್ದಲ್ಲ. ಅಸಿಸ್ಟೆಂಟ್ ಕಮಿಷನರ್ ಪದವಿ ಬಂದ ಮೇಲೆ ಬರೋ ಮೈಗಳ್ಳತನ ನಮಗೆಲ್ಲಾ ಚಿಕ್ಕಂದಿನಲ್ಲಿಯೇ ಬರೋವಾಡಿಕೆ. ಹಾಗಾಗಿ ಹದಿನೆಂಟನೇ ವಯಸ್ಸಿಗೆ ಹೈಸ್ಕೂಲಿಗೆ ಬಂದು ಇಪ್ಪತ್ತೈದಕ್ಕೆ ಬಿಟ್ಟೆ.

ನೀವು ಮೈಗಳ್ಳರನ್ನು ನೋಡಿದರೆ ಪ್ರಾಯಶಃ ಗುರ್ತಿಸಲಾರಿರಿ. ಅವರೇನು ಸೋಮಾರಿಗಳ ಹಾಗೆ ತಮ್ಮ ಕಸುಬನ್ನು ಹೊರಗೆ ತೋರಿಸುವುದಿಲ್ಲ. ಒಂದು ಕಛೇರಿಗೆ ಹೋಗಿ, ಅಲ್ಲಿ ಆಫೀಸರು ತನ್ನ ಟೇಬಲ್‌ಮೇಲೆ "ಅರ್ಜೆಂಟ್" ಅಂತ ಕೆಂಪು ಮಶೀಲಿ ತಿದ್ದಿರೋ ಕಾಗದಗಳ ರಾಶೀನ ಬೆಟ್ಟದ ಹಾಗೆ ಪೇರಿಸಿಕೊಂಡು "ಕಾಮನ್‌ಸೆನ್ಸ್ ಕ್ರಾಸ್‌ವರ್ಡ್" ಕೂಪನ್ ತುಂಬುತ್ತಾ ಕೂತಿರುತ್ತಾನೆ. ಇನ್ನೂ ಗುಮಾಸ್ತೆಗಳನ್ನು ನೋಡಿ— ಒಬ್ಬ "ಹಿಂದೂ"— ಒಬ್ಬ "ಬ್ಲಿಟ್ಸ್" ಒಬ್ಬ "ಲಲಿತಾ ಕಾಂಪಿಟಿಷನ್" ಹೀಗೆ ನಾನಾತರಹ ಮುತುವರ್ಜಿಯಲ್ಲಿರುತ್ತಾರೆ. ಇವರಿಗೇನು ಕೆಲಸವಿಲ್ಲವೇ ? ತಲೆಹೋಗೋ ಕೆಲಸವಿದೆ. ಅವತ್ತೇ "ಪಾಸ್"

ಆಗಬೇಕಾದ ಕಾಗದಗಳು ಬಂಡಿಗಟ್ಟಳೆ ಬಿದ್ದಿವೆ. ಅವನ್ನು ಮುಗಿಸುವುದಕ್ಕೆ ಅವರಿಗೆ ಮನಸ್ಸಿಲ್ಲ ಅಷ್ಟೆ. ಇನ್ನೂ ಕೆಲವು ಸೈಗಳ್ಳರು ತಾವು ಎಲ್ಲಿರಲಿ, ಎಷ್ಟೇ ಕೆಲಸವಿರಲಿ ತಮ್ಮ ಶರೀರವನ್ನೂ ಮನಸ್ಸನ್ನೂ ಬೇರೆ ಮಾಡಿ ಹಗಲು ಕನಸು ಕಾಣುತ್ತಿರುತ್ತಾರೆ. ನಾನು ಸ್ವಲ್ಪ ಅದೇ ತರಹ. ಎಷ್ಟೋಬಾರಿ ಸ್ಕೂಲಿನಲ್ಲಿ ನನ್ನ ಪಾಠಗಳನ್ನು ದಾಟಿ ಸಹರಾ ಮರುಭೂಮಿಯಲ್ಲಿ ಒಂಟೆಯಮೇಲೂ ಹಾಲಿವುಡ್ಡಿನಲ್ಲಿ, ಗ್ರೇಟಾ ಗಾರ್ಬೋನಿನ ಜೊತೆಯಲ್ಲಿಯೂ ಸರ್ಕಸ್‌ನಲ್ಲಿ ಸಿಂಹ ಹುಲಿಗಳ ಜೊತೆಯಲ್ಲಿಯೂ ನಿರಾತಂಕವಾಗಿ ಕಾಲ ಕಳೆಯುತ್ತಿದ್ದೆ. ಒಂದು ಬಾರಿ ಹೀಗೇ ಒಂದು ಸಿಂಹದ ಜೊತೆಯಲ್ಲಿ ಸರಿಸರಿಯಾಗಿ ಹೊಡೆದಾಡುತ್ತಿದ್ದೇನೆ. ಟಾರ್ಜಾನ್ ತರಹವೇ ನನ್ನ ಸೈ ಥಳಕ. ಇನ್ನೇನು ಸಿಂಹದ ಪಕ್ಕೆಲುಬಿನಲ್ಲಿ ನನ್ನ ಚೂರಿಯನ್ನು ಅಮುಕಬೇಕು. ಮೇಷ್ಟ್ರು "ಲೇ—ಏನ್ಮಾಡ್ತಿದ್ದೀಯಾ ? ಜಾವಾದಿಂದ ನಮಗೆ ಏನೇನು ರಫ್ತಾಗುತ್ತೆ?" ಅಂದರು. ನಾನು ತಬ್ಬಿಬ್ಬಾಗಿ "ಸಿಂಹ !" ಅಂದೆ.

ಸೈಗಳ್ಳತನದ ಸುಖ ನಿಮಗೆ ತಿಳಿಯಬೇಕಾದರೆ ನೀವು 'ಸೈಗಳ್ಳರಾದರೇನೇ'. ನಿಮ್ಮ ಸೋದರತ್ತೆ ಮೈಸೂರಿಂದ ನಾಳೆ ಬೆಳಗಿನ ಝೂವೆ ಇಳಿಯುತ್ತಾರೆ ಎಂದಿಟ್ಟುಕೊಳ್ಳಿ. ನೀವು ಛಳಿಯಲ್ಲಿ ಸ್ಟೇಷನ್ನಿಗೆ ಹೋಗಬೇಕು. ಅದಕ್ಕೆ ಬದಲು ಮುಸುಕು ಹಾಕಿ ಮಲಗಿದರೆ ಎಷ್ಟು ಸುಖ ಗೊತ್ತೇ. ಪ್ರತಿನಿತ್ಯ ಬೆಳಗಿನ ಝೂವೆ ಬರುತ್ತವೆ. ನಿತ್ಯ ಮುಸುಕ ಹಾಕಿ ಮಲಗಬಹುದು. ಆದರೆ ನಿಮ್ಮತ್ತೆ ನಿತ್ಯ ಬೆಳಗಿನ ಝೂವೆ ಬರೊಲ್ಲ. ನಿತ್ಯ ನೀವು ಸ್ಟೇಷನ್ನಿಗೆ ಹೋಗಬೇಕಾಗಿಲ್ಲ. ಇನ್ನು ಮುಸುಕು ಹಾಕಿ ಮಲಗಿದರೆ ಆನಂದವೆಲ್ಲಿ ?

ಈಗೀಗ ಪ್ರಪಂಚದಲ್ಲಿ ಸೈಗಳ್ಳರು ಕಮ್ಮಿಯಾಗುತ್ತಿದ್ದಾರೆ. ಈ ಕಾರು, ರೈಲು, ಏರೋಪ್ಲೇನು - ಆಟಂಬಾಂಬು ಇವುಗಳ ಗಲಾಟೇಲಿ ಸೈಗಳ್ಳತನಕ್ಕೆ ಪುರುಸೊತ್ತೇ ಇಲ್ಲ. ಒಂದುವೇಳೆ ಹಿಟ್ಲರ್ ಸೈಗಳ್ಳನಾಗಿದ್ದಿದ್ದರೆ ಈ ಯುದ್ಧ ನಡೀತಿತ್ತೋ ಇಲ್ಲವೊ ! ಆ ಬುರ್ಡೆನಾಬಿ ತನ್ನ ಕೈಲಿ ಚೂರಿ ಹಿಡಿದು ನಿಮ್ಮ ಬೆನ್ನು ಹೊಂಚು ಕಾಯುಕ್ಕೆ ಬದಲು ಸೈಗಳ್ಳನಾಗಿದ್ದಿದ್ದರೆ ಎಷ್ಟೋ ನೆಮ್ಮದಿ. ಹೆಂಗಸರಲ್ಲಿ ಸೈಗಳ್ಳರೇ ಅಪರೂಪ. ಈಗೇನು ಹೆಂಗಸರೇ ಡಾಕ್ಟರು, ಲಾಯರು, ಮ್ಯಾಜಿಸ್ಟ್ರೇಟು, ಕೌನ್ಸಿಲರು—ಎಲ್ಲಾ ಆಗಿಬಿಟ್ಟಿದ್ದಾರೆ. ಈಗೀಗ ಇಂಜನಿಯರು, ಪೋಲೀಸು ಕೂಡ ಆಗುತ್ತಿದ್ದಾರಂತೆ. ಇದೆಲ್ಲಾ ನಮಗೆ ಒಪ್ಪಿಗೆಯುದಕ್ಕೇ. ಹೆಂಗಸರು ಸಂಪಾದನೆಗೆ ಶುರು ಮಾಡಿದರೆ ನಮಗೆಷ್ಟೋ ಸುಖ. ನಾವೆಲ್ಲಾ ಸುಖವಾಗಿ ಜ್ಯೋತಿಷ್ಯ ಕಲಿಯುತ್ತಾ ಜೋಗುಳ ಹೇಳುತ್ತ ಇರಬಹುದು. ಅಥವಾ ಕಮ್ಮಿ ಬಡ್ಡಿಗೆ ದುಡ್ಡು ತೆಗೆದು ಜಾಸ್ತಿ ಬಡ್ಡಿಗೆ ಕೊಟ್ಟು ಬಿಟ್ಟೀಹಣ ಸಂಪಾದಿಸಬಹುದು—ಜಾಸ್ತಿಬಡ್ಡಿ ಕೊಡುವವನ ಅಸಲಿಗೇ ಚಕ್ಕರ್ ಹೊಡೆಯದಿದ್ದರೆ. ಇದಕ್ಕಿಂತ ಕಷ್ಟವಾದ ಕೆಲಸ ನಮ್ಮಿಂದ ನಿಜವಾಗಿ ಅಸಾಧ್ಯ. ಅಂಥಾ ಸುದಿನ ಬಂದೀತೇ ?

—ಕೇ. ಫ

# ಆಟಂ - ಕಾಟ

ಸಂಯುಕ್ತ ಸಂಸ್ಥಾನದ ನೌಕಾಬಲ ವೈದ್ಯ ಸಂಶೋಧನೆ ಇಲಾಖೆಯ ಉನ್ನತಾಧಿಕಾರಿಗಳಲ್ಲೊಬ್ಬರಾದ ಕಾಪ್ಟನ್ ಡ್ರೀಜರ್ ಎಂಬ ಮಹಾಶಯರು ಮೊನ್ನೆ ಬೆತ್ಸಿಡ ಎಂಬ ಊರಿನ ತಮ್ಮ ದೇಶಬಾಂಧವರಿಗೆ ಒಂದು ಅಮೂಲ್ಯ ಉಪನ್ಯಾಸ ಕೊಟ್ಟರು. ಅದನ್ನು ರಾಯಿಟರ್ ಕಂಪನಿಯವರು ಜಗತ್ತಿನ ಮೂಲೆ ಮೂಲೆಗೂ ತಾರ್ ಮೂಲಕವೂ ಬೇತಾರ್ ಮೂಲಕವೂ ರವಾನಿಸಿ ಮಹದುಪಕಾರಮಾಡಿದಾರೆ. ಮದರಾಸಿನ ಹಿಂದೂ ಪತ್ರಿಕೆಯೂ ಕೂಡ ಉಪನ್ಯಾಸದ ಸಾರಾಂಶವನ್ನು ಅಚ್ಚು ಹಾಕಿದೆ.

ಕ್ಯಾಪ್ಟನ್ ಡ್ರೀಜರು ಮಾತನಾಡಿದ್ದು ಆಟಂಬಾಂಬಿನ ವಿಷಯ. ಮುಂದಿನ ಯುದ್ಧದಲ್ಲಿ ಬಿಳೀ ಜನರು ಆಟಂಬಾಂಬುಗಳನ್ನೆಸೆದು ತಮ್ಮ ತಮ್ಮ ನಗರಗಳನ್ನು ನಾಶಮಾಡಿಕೊಳ್ಳಲು ಹವಣಿಸುತ್ತಿರುವುದು ಸರಿಯಷ್ಟೆ. ಎರಡೇ ಎರಡು ಬಾಂಬುಗಳ ಪ್ರಯೋಗದಿಂದ ಜಪಾನೀಯರು ಶರಣಾಗತರಾದದ್ದನ್ನು ಕಂಡು, ಅವರು ಹುರುಪುಗೊಂಡಿದ್ದಾರೆ. ಜರ್ಮನಿಯವರನ್ನೇ ತಮ್ಮ ತಮ್ಮ ದೇಶಗಳಿಗೆ ಸಾಗಿಸಿ ಅವರಿಂದ ಪರಮಾಣು ಭೇದನ ತಂತ್ರವನ್ನು ಕಲಿಯುತ್ತಿದಾರೆ. ಒಡೆದು ಚೂರಾದ ಸ್ವತಂತ್ರ ಭಾರತವು ಮುಂದಿನ ಯುದ್ಧದ ಸೆಳೆತದಿಂದ ತಪ್ಪಿಸಿಕೊಳ್ಳಲಾರದೆ ಹೋಗಬಹುದು. ಆದ್ದರಿಂದ, ಡ್ರೀಜರ ಉಪನ್ಯಾಸ ನಮಗೂ ಅತ್ಯಗತ್ಯ. ಅದಕ್ಕಾಗಿಯೇ, ಹಿಂದೂ ಮುಂತಾದ ಪತ್ರಿಕೆಗಳು ಅವರ ಉಪದೇಶಕ್ಕೆ ತಮ್ಮ ಹಾಳೆಗಳಲ್ಲಿ ಸ್ಥಳ ಕೊಟ್ಟದ್ದು.

ಆಟಂಬಾಂಬಿನ ಅನಾಹುತದಿಂದ ನರಮನುಷ್ಯ ಹೇಗೆ ತಪ್ಪಿಸಿಕೊಳ್ಳಬಹುದೆಂಬುದೇ ಡ್ರೀಜರ ಉಪದೇಶ ! ಬೆಂಗಳೂರಿನಂಥ ಭಾರಿ ಕಲ್ಯಾಣನಗರವಾಗಿದ್ದ ಹಿರೊಷೀಮ, ನಾಗಸಾಕಿ ಎಂಬ ಎರಡು ಹೊಳಲುಗಳನ್ನು ಡ್ರೀಜರ ಸಹೋದ್ಯೋಗಿಗಳು ಮರಳುಗಾಡು ಮಾಡಿದರು. ನೌಕಾಯುದ್ಧದಲ್ಲಿ ಆಟಂಬಾಂಬನ್ನು ಹೇಗೆ ಪ್ರಯೋಗಮಾಡುವುದೆಂಬುದನ್ನು ಅವರು ಬಿಕನಿ ಎಂಬಲ್ಲಿ ಸಂಶೋಧನೆ ನಡೆಸಿದರು. ಆದ್ದರಿಂದ, ಡ್ರೀಜರು ಅನುಭವಸ್ಥರು, ಮೇಧಾವಿಗಳು, ಪಂಡಿತರು, ಸಹತಾಪಿಗಳು, ಸಮರ್ಥರು. ಆಟಂ ಕಾಟದಿಂದ ಹೇಗೆ ಪಾರಾಗಬಹುದೆಂಬ ಅವರ ಸಲಹೆಗಳನ್ನು ನಾವು ಮನಗಂಡು, ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕು.

ಆಟಂಕಾಟದಿಂದ ಪಾರಾಗಲು ಅವರು ಹತ್ತು ಸಲಹೆಗಳನ್ನು ದಯಪಾಲಿಸಿದ್ದಾರೆ. ಜವಾಬ್ದಾರಿಯುತವಾದ ಸಲಹೆಗಳು, ಅವು; ಆದರೂ, **ಕೊರವಂಜಿಯ ವಾಚಕರಿಗೆ, ಅವೆಲ್ಲ ಬೇರೊಂದು ರೀತಿಯಾಗಿ ಕಾಣಬಹುದು........**

(೧) ಮೇಲಿಂದ ಕೆಳಗಿಳಿದು ಭೂಮಿಗೆ ನೂರಿನ್ನೂರಡಿ ಎತ್ತರದಲ್ಲೇ ಸಿಡಿಯುವ ಈ ಬಾಂಬುಗಳನ್ನು, ಸಿಡಿಯುವ ಹೊತ್ತಿನಲ್ಲಿ, ಕಣ್ಣುಬಿಟ್ಟು ನೋಡಲೇ ಕೂಡದು. (ಹಿರೊಷೀಮದಲ್ಲಿ ಅನೇಕರು ಹೀಗೆ ಬೆಪ್ಪು ಬೆಪ್ಪಾಗಿ ಕಣ್ಣು ಬಿಟ್ಟಿದ್ದರಿಂದಲೇ, ಹತರಾದದ್ದು. ಆಗಿನ ತೇಜಸ್ಸಿಗೆ ತಾನೇ ತಾನಾಗಿ ಕಣ್ಣು ಮುಚ್ಚಿಕೊಳ್ಳುತ್ತೆ, ಅಂತಾರೆ ! ಆದರೂ, ಅದನ್ನು ನಂಬಿಕೊಂಡು ನಿಂತಿರುವುದು ಅತ್ಯಂತ ಅಪಾಯಕರ)

(೨) ಆಟಂಬಾಂಬು ಸಿಡಿದಕೂಡಲೇ, ವಾಯುಮಂಡಲದಲ್ಲಿರುವ ಕಣಗಳೆಲ್ಲವೂ ಮನುಷ್ಯನಿಗೆ ವಿಷಮಯವಾಗುವುದರಿಂದ, ಅಲ್ಲಿಂದ ನೀವು ಮೂರು ಮೈಲಿಗಳ ದೂರದಾಚೆಗಾದರೂ, ಓಡಲೇಬೇಕು. (ಮೂರು ಮೈಲಿ ಆಚೆಗಿದ್ದ ಆ ಸಾವಿರಾರು ನಾಗಸಾಕಿಯವರಿಗೂ ಸುಟ್ಟಗಾಯಗಳಾದುವು. ಆದರೂ, ಅವರು ಈಗಲೂ ಬದುಕಿದಾರೆ ! ಅಂದರೆ, ಆಸ್ಪತ್ರೆಗಳಲ್ಲಿ. ಆದರೂ .......)

(೩) ವಾತಾವರಣದ ವಿಷ ಮುಖ್ಯವಾಗಿ ಬಟ್ಟೆಬರೆಗಳಲ್ಲಿ ಸೇರಿಕೊಳ್ಳುವುದರಿಂದ, ಬಾಂಬು ಸಿಡಿದ ಕೇಂದ್ರಸ್ಥಾನದಿಂದ ಪರಾರಿಯಾಗಲು ನೀವು ಅತಿವೇಗವಾಗಿ ಓಡುವ ಮೊದಲು, ನೀವು ಧರಿಸಿರುವ ಎಲ್ಲ ವಸ್ತ್ರಗಳನ್ನೂ ಸಂಕೋಚವಿಲ್ಲದೆ ಬಿಚ್ಚಿ ಬಿಸಾಕಬೇಕು. (ಆಟಂಬಾಂಬು ಪ್ರಯೋಗದ ಸಂಭವ ತಿಳಿದ ಕೂಡಲೇ ಇದಕ್ಕೆ ಸಿದ್ಧರಾಗುವುದೇ ಮೇಲು........ ಹಿರೊಷಿಮದ ಜವಾನೀಯರು ಈ ಗುಟ್ಟು ತಿಳಿದಿರಲಿಲ್ಲ. ಬಿಕಿನಿಯಲ್ಲಿ ಅಂಗಿ ಷರಾಯಿ ಏನೂ ತೊಟ್ಟುಕೊಳ್ಳದೆ ನಿಂತಿದ್ದ ಹಲವು ಆಡು ಕೋಳಿ ಹಂದಿಗಳು ಇನ್ನೂ ಅಸ್ತವ್ಯಸ್ತವಾಗಿ ಉಸಿರಾಡುತ್ತಿವೆ.)

(೪) ಆಟಂಬಾಂಬು ಯಾವ ಜಾಗಕ್ಕೆ ನೇರ ಮೇಲುಭಾಗದಲ್ಲಿ ಸಿಡಿಯುತ್ತದೋ, ಅಲ್ಲೇ ಒಂದು ರಕ್ಷಣಾಲಯವನ್ನು ಹೊಕ್ಕರೆ, ನಿಮಗೆ ಪ್ರಾಣಹಾನಿ ಯಾಗುವುದು ಅಸಂಭವ ! (ಇದು ಬಹಳ ಮುಖ್ಯವಾದ ರಕ್ಷಣೋಪಾಯ ! ಸಿಡಿದ ಸ್ಥಳಕ್ಕೆ ಏಳು ಅಥವಾ, ಎಂಟುನೂರಡಿಗಳು ಸುತ್ತ ಎಲ್ಲಾದರೂ ಒಂದು ಸಿಮೆಂಟ್ ಕಾಂಕ್ರೀಟ್ ನೆಲಮಾಳಿಗೆ ಸಿಕ್ಕರೆ, ನೀವು ನಿಜವಾಗಿಯೂ ಪುಣ್ಯವಂತರು. ಹಿರೊಷೀಮದ ಮೇಲೆ ಮೊದಲನೆಯ ಬಾಂಬನ್ನು ಎಸೆದಾಗ, ಬ್ಯಾಂಕರ್ಸ್ ಕ್ಲಬ್ ಎಂಬ ಕಾಂಕ್ರೀಟ್ ಕಟ್ಟಡದ ನೆಲಮನೆಯಲ್ಲಿ ಅಕಸ್ಮಾತ್ತಾಗಿ 23 ಜನರಿದ್ದರು. ಅವರಲ್ಲಿ 21 ಜನರು ಸತ್ತರು, ಸರಿ ! ಆದರೆ, ಇಬ್ಬರುಳಿದರಲ್ಲಾ ! ಅದು ಸೋಜಿಗ !)

(೫) ಇಂಥ ನೆಲಮಾಳಿಗೆಗಳಲ್ಲೂ ಕೂಡ, ಆಟಂಬಾಂಬು ಸಿಡಿದ ತರುವಾಯ, ಎರಡು ಮೂರು ದಿನಗಳಿಗಿಂತ ಹೆಚ್ಚು ಕಾಲ ಇರಕೂಡದು. ಹೊರಗಿನ ವಿಷ ವಾಯುವನ್ನು ಭೇದಿಸಿಕೊಂಡು ನೀವು, ನಿಮ್ಮಿಂದ ಸಾಧ್ಯವಾದರೆ, ಅಲ್ಲಿಂದ ಬಹು ದೂರ ಓಡಬೇಕಾಗುತ್ತದೆ. (ಲಕ್ಷಾಂತರ ಜನರು ವಾಸವಾಗಿರುವ ಪಟ್ಟಣಗಳನ್ನು

ರಕ್ಷಿಸಲು ಆಯಾ ಸರ್ಕಾರಗಳಿಗೆ ಆಸೆ ಇರುವುದಾದರೆ, ಈಗಿನಿಂದಲೇ ಅದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಪ್ರತಿ ಐನೂರು ಚದುರಡಿಗೂ ಒಂದೊಂದು ಭಾರಿ ಕಾಂಕ್ರೀಟ್ ನೆಲಮಾಳಿಗೆ, ಈ ನೆಲಮಾಳಿಗೆಗಳಿಂದ ನಾಗರಿಕ ರನ್ನು ಶೇಖರಿಸಿ ದೂರದೂರದ ಹಳ್ಳಿಗಳಿಗೆ ಸಾಗಿಸಲು ಭೂಮಿಯ ಒಳಭಾಗದಲ್ಲಿ ರೈಲುಗಾಡಿಗಳು, ಇಷ್ಟನ್ನಾದರೂ ಸರ್ಕಾರ ಎನಿಸಿಕೊಂಡಿರುವ ಸಂಸ್ಥೆ ಮಾಡಿಸಲೇ ಬೇಕು. ಹೀಗೆ ಮಾಡಿದರೆ, ಶೇಕಡ ಹತ್ತರಷ್ಟು ಪ್ರಜೆಗಳನ್ನಾದರೂ ಉಳಿಸ ಬಹುದು. ಉಳಿದವರನೇಕರಿಗೆ ಸಂತಾನಾಭಿವೃದ್ಧಿಯಾಗಲಾರದು ; ಆದರೂ, ಅವು ಕುಂಟು ಕುರುಡು ಹುಚ್ಚು ಹೀಗೆ ಹುಟ್ಟುವುದೇ ಸಹಜ !)

(೬) ಬಿಕಿನಿ ಪರೀಕ್ಷೆಯಂತೆ ಆಟಂಬಾಂಬು ನೀರಿನಮೇಲೆ ಬಿದ್ದು ಸಿಡಿದರೆ, ಐದಾರು ಮೈಲಿ ಎತ್ತರಕ್ಕೆ ನೀರು ಮೇಲಕ್ಕೆ ಹಾರಿ ವಿಷಮಯವಾಗಿ, ಗಾಳಿಯಲ್ಲಿ ತೂರಿ, ನೂರಾರು ಮೈಲಿ ಆಚೆ ಪ್ರದೇಶದಲ್ಲಿ ಮಾರಿಮಳೆಯಾಗಿ ಬೀಳುತ್ತದೆ ಇದು ನೆಲಬಾಂಬಿಗಿಂತ ನಾಶಕಾರಿ. ಈ ತುಂತುರುವಿಂದ ಒದ್ದೆಯಾದ ಬಟ್ಟೆ ಕೈಲಾಸ ವಸ್ತ್ರವೇ ಸರಿ ! ಆದ್ದರಿಂದ, ಶತ್ರುವಿನ ತಂತ್ರ ತಿಳಿದಕೂಡಲೇ, ವಸ್ತ್ರಸಂನ್ಯಾಸವೇ ಮೇಲು. ಈ ತುಂತುರು ತಗುಲಿದರೆ, ತಕ್ಷಣ ಮರಣಸಂಭವಿಸುವುದಿಲ್ಲ. ಅಲ್ಲದೆ, ಕೇವಲ ಒಂದು ಕೊಡೆಯನ್ನು ಬಿಚ್ಚಿ ಹಿಡಿಯುವುದರಿಂದ ನೀವು ಕೊಂಚ ಹೊತ್ತು ಜೀವಂತವಾಗಿ ಓಡಾಡಬಹುದು.

(೭) ಆಟಂಬಾಂಬು ಆಕಾಶದಲ್ಲಾಗಲಿ ನೆಲದಲ್ಲಾಗಲಿ ನೀರಲ್ಲಾಗಲಿ ಎಲ್ಲಿ ಸಿಡಿದರೂ, ನೀವು ಅದರಿಂದ ಪಾರಾಗಲು ಓಡುತ್ತಿರುವಾಗ, ನಿಮ್ಮ ಕೂದಲಾಗಲಿ ಮೈಯಾಗಲಿ ಕೊಂಚವೂ ಒದ್ದೆಯಾಗಿರಕೂಡದು. ತುಟಿಯನ್ನು ನಾಲಗೆಯಿಂದ ನೆಕ್ಕುವುದೂ ಕೂಡ ಮಾರಕ ! (ನಾಗಸಾಕಿಯಲ್ಲಿ ಈ ಒಂದು ಕಾರಣದಿಂದಲೇ ನೂರಾರು ಜನ ಸತ್ತರೆಂದು ಊಹಿಸಲಾಗಿದೆ.) ಐವತ್ತು ಅರವತ್ತು ಮೈಲಿ ದೂರಕ್ಕೆ ಹೋದಮೇಲೆ, ಒಣಗಿದ ತುಟಿಗೆ ನನವು ಸೋಕಿಸಬಹುದು.


(೮) ಬಾಂಬು ಸಿಡಿದೆಡೆಯಿಂದ ಓಡುವಾಗ, ಸಂಪೂರ್ಣ ಮುಚ್ಚಿದ, ವಾಯು ಸಂಚಾರಕ್ಕೆ ಕೊಂಚವೂ ಬಿರುಕು ಮುರುಕುಗಳಿಲ್ಲದ ವಾಹನಗಳು ತುಂಬ ಸಹಾ ಯಕ. (ಕುದುರೆ ಗಾಡಿಗಳಾದರೆ, ಕುದುರೆ ಸುತ್ತ ಗಾಳಿಯಾಡದಂತೆ ಕಂಬಳಿ ಬಿಗಿಯಬೇಕಾಗುತ್ತದೆ ; ಆದರೆ, ಬಟ್ಟೆ ಭರೆ ವರ್ಜ್ಯ ಎಂಬುದು ನೆನಪಿರಲಿ.)

(೯) ರಕ್ಷಣಾಸ್ಥಳಗಳಲ್ಲಿರುವಾಗಲೂ, ಭೂಗತ ರೈಲು ಪ್ರಯಾಣಮಾಡು ವಾಗಲೂ, ಬೆತ್ತಲೆ ಭೀತಿಯಿಂದ ಪಲಾಯನಮಾಡುವಾಗಲೂ, ನಿಮ್ಮ ಸಂಗಡ ಲೋಹಪದಾರ್ಥ ಯಾವುದೂ ಇರಕೂಡದು (ಸಿಗರೇಟ್‌ಕೇಸು, ಮದುವೆ ಉಂಗುರ, ಮೂಗುತಿ, ಗೆಜ್ಜೆ, ಕೈಗಡಿಯಾರ — ಎಲ್ಲವನ್ನೂ ವಿಸರ್ಜಿಸಬೇಕಾಗುತ್ತದೆ.

ಹಾಗೆಯೇ, ಸಾಬೂನು, ಬ್ರೋಮೋಡುಗಳು, ಬೆಳ್ಳಿ ನಶ್ಯದ ಡಬ್ಬಿ, ಕೊಂಬಿನದೂ ಸಹ, ಕೈಯಲ್ಲಿ ಹಿಡಿದಿರಕೂಡದು. ಹಲ್ಲಿಗೆ ಚಿನ್ನ ತುಂಬಿದ್ದರೆ, ಅದನ್ನು ಕಿತ್ತಿಸಿದ ಮೇಲೆ, ಮುಂದಿನ ಕೆಲಸ.)

(೧೦) ಎಲ್ಲಕ್ಕೂ ಮುಖ್ಯವಾಗಿ, ಪ್ರತಿ ನಗರದಲ್ಲೂ ಆಟಂ ವಾರ್ಡನರನ್ನೂ ಆಟಂ ಡಾಕ್ಟರುಗಳನ್ನೂ ನಿಯಮಿಸಿಕೊಂಡು, ಪ್ರತಿಕ್ಷಣದಲ್ಲೂ ಅವರ ಸಲಹೆ, ಸೂಚನೆ, ಸಂಪ್ರದಾಯ, ಸಿಸ್ಟಮುಗಳಂತೆ ಸದಾ ನಡೆಯತಕ್ಕದ್ದು.

ಆಟಂಭೀರುಗಳಾದ ನಾವೆಲ್ಲರೂ ಪಂಡಿತೋತ್ತಮರೂ ಲೋಕಸೇವಾ ಪರಾಯಣರೂ ಆದ ಡ್ರೀಜರವರಿಗೆ ತುಂಬ ಋಣಿಗಳೇ ಸರಿ.



# ಹಣವಿದ್ದ ಗಂಡ..

ಸುಂದರಮ್ಮನ ಮನೆಯಲ್ಲಿ ಅಂದು ಶಬ್ದ ಕೇಳಿಬರುತ್ತಿತ್ತು. ಅಂದಮೇಲೆ ಅಂದು ಭಾನುವಾರವೆಂದು ರಾಜಮ್ಮನಿಗೆ ಗೊತ್ತು  ನೆರೆಮನೆಯಲ್ಲೇ ಇದ್ದು ಕೊಂಡು ಅಷ್ಟು ಗೊತ್ತಿಲ್ಲದಿದ್ದರೆ ಹೇಗೆ. ಭಾನುವಾರ ಸುಂದರಮ್ಮ ತಿನ್ನುವಷ್ಟು ಏಟುಗಳನ್ನು ಬೇರಾವ ಹೆಂಗಸೂ ತನ್ನ ಜೀವಮಾನದಲ್ಲೇ ತಿನ್ನಲಾರಳು. ಆದರೆ ಉಳಿದ ದಿನಗಳಲ್ಲಿ ಮಾತ್ರ ಆಕೆ ನಗುವಂತೆ ಯಾವಾಕೆಯೂ ಸಂತೋಷವಾಗಿರಲೂ ಆರಳು. ಈ ಸಮಸ್ಯೆ ರಾಜಮ್ಮನಿಗೆ ಬಗೆಹರಿದಿರಲಿಲ್ಲ.

ರಾಜಮ್ಮ ಸುಂದರಮ್ಮನ ಮನೆ ಹೊಕ್ಕಾಗ ಆಕೆಯ ತುಟಿಯಿಂದ ರಕ್ತ ಸುರಿಯುತ್ತಿತ್ತು. ಮುಖ ಊದಿತ್ತು. ಅತ್ತು ಅತ್ತು ಕಣ್ಣುಗಳು ಕೆಂಪಾಗಿದ್ದುವು. ತಲೆಗೂದಲು ಕೆದರಿ ಅಸ್ತವ್ಯಸ್ತವಾಗಿತ್ತು  ಹಾಸಿಗೆಯಮೇಲೆ ಹೊದ್ದುಕೊಂಡು ಆಕೆ ಮಲಗಿದ್ದಳು. ಇಷ್ಟಾದರೂ ಆಕೆಯ ಮುಖದಲ್ಲಿ ದುಃಖದ ಗುರುತು ಲವ ಲೇಶವಾದರೂ ಇರಲಿಲ್ಲ.

“ ಇದೇನು ಸುಂದರಮ್ಮ ? ಭಾನುವಾರ ಬಂತೂಂದರೆ ನಿಮಗೆ ಶನಿದೇವ ವಕ್ರಿಸುತ್ತಾನಲ್ಲ. ಅಷ್ಟು ಹೊಡೆತ ತಿಂದರೂ ನೀವೇಕೆ ನಿಮ್ಮ ಯಜಮಾನರನ್ನು ಕಂಡರೆ ಅಷ್ಟು ಪ್ರಾಣ ಬಿಡುತ್ತೀರಿ ?” ರಾಜಮ್ಮ ಕೇಳಿದಳು.

“ ಅಯ್ಯೋ, ನಮ್ಮ ಯಜಮಾನರ ಮನಸ್ಸೆಷ್ಟು ಮೃದು ಗೊತ್ತೇ ರಾಜಮ್ಮ ನವರೇ ! ಏನೋ ವಾರಕ್ಕೊಂದು ಭಾನುವಾರ ರಜ ಸಿಕ್ಕುತ್ತದೆಂದು, ಸ್ವಲ್ಪ ಮನಸ್ಸಂತೋಷಪಡಿಸಿಕೊಳ್ಳುತ್ತಾರೆ, ಫ್ಯಾಕ್ಟರಿಯ ಯೋಚನೆ ಮರೆಯಲು. ಆಗ ಏನೋ ಜ್ಞಾನದಲ್ಲಿ ನನಗೊಂದೆರಡು ಬಿಗಿಯುತ್ತಾರೆ ಅಷ್ಟೆ. ಆದರೆ ಬಾಕಿ ದಿನಗಳು ನನ್ನನ್ನೆಷ್ಟು ಸಂತೈಸುತ್ತಾರೆ ಗೊತ್ತೆ ? ಅಂದು ತಾವು ಮಾಡಿದ ಕೆಲಸಕ್ಕೆ ವಾರ ವೆಲ್ಲ ಪಶ್ಚಾತ್ತಾಪ ಪಡುತ್ತಾರೆ  ನನ್ನನ್ನು ನಗಿಸಲು ಏನು ಬೇಕಾದರೂ ಮಾಡಲು ಸಿದ್ಧರಾಗಿರುತ್ತಾರೆ ”.

“ ಹ್ಞೂಂ ! ’ ರಾಜಮ್ಮನ ಮುಖದಲ್ಲಿ ವೇದನೆ ಸುಳಿದು ಮಾಯವಾಯಿತು. “ಅಷ್ಟೇ ಅಲ್ಲ, ನಾನು ಏಟುತಿಂದು ಮಲಗಿದಾಗ ನಾನು ಕೇಳಿದುದೆಲ್ಲವನ್ನೂ ತಂದು ಕೊಡುತ್ತಾರೆ. ಸಾಲವಾಗಲಿ, ಸೋಲವಾಗಲಿ ಯೋಚಿಸುವುದಿಲ್ಲ. ನೋಡಿ ” ಎಂದು ಹಾಗೇ ಎದ್ದು ತನ್ನ ಸರಕುಗಳನ್ನು ತೋರಿಸುತ್ತ ಸುಂದರಮ್ಮ ಹೇಳಿದಳು. “ ಇಲ್ಲಿ ನೋಡಿ, ಈ ಜಾರ್ಜೆಟ್ ಸೀರೆ ಈಗ ತಿಂಗಳ ಹಿಂದೆ ಕೊಂಡುಕೊಟ್ಟುದು.

ಅಂದು ನನ್ನ ಮೈ ಹೊಡೆತದಿಂದ ಅನೇಕಕಡೆ ತರೆದುಹೋಗಿತ್ತು. ನಾನು ಬಹಳ ಅತ್ತೆ ನನ್ನನ್ನು ಸಮಾಧಾನ ಪಡಿಸಲು ನನಗೆ ಇದನ್ನು ತಂದುಕೊಟ್ಟು ಮೇಲೆ ೧೫ ರೂಪಾಯಿ ಕೊಟ್ಟರು. ಇನ್ನೊಂದು ಸಲ ಹೊಡೆತಧಿಂದ ನನ್ನ ಮೂಗಿನ ಕಂಬಿ ಒಡೆದುಹೋಗಿತ್ತು. ಆಗ ತೆಗೆದುಕೊಟ್ಟದ್ದು ಈ ಬೇಸರಿ - - - -" ಹೀಗೆಯೇ ತನ್ನ ಕಿವಿ ಪೆಟ್ಟು ತಿಂದಾಗಿನ ಓಲೆ, ಕೈಮುರಿದಾಗಿನ ಬ್ರಿಡ್ಜ್ ಬಳೆ ತನಗೆ ಮಾತ ನಾಡಲಾಗದಂತೆ ಹೊಡೆದಾಗಿನ ರೇಡಿಯೋ, - - - ಎಲ್ಲವನ್ನೂ ರಾಜಮ್ಮನಿಗೆ ತೋರಿದಳು. "ಅಷ್ಟೇ ಅಲ್ಲ, ಏಟುತಿಂದಾಗ ನಾನು ಅವರೊಡನೆ ನೋಡುವ ನಾಟಕಗಳಿಗೆ ಲೆಕ್ಕವೇ ಇಲ್ಲ - - - - "

ರಾಜಮ್ಮನ ಬಾಯಲ್ಲಿ ಜಲ ಊರಿ, ಉರಿಯುತ್ತಿದ್ದ ಮುಖದಲ್ಲಿನ ಹೊಟ್ಟೆ ಕಿಚ್ಚಿನಿಂದ ಬತ್ತಿಹೋಯಿತು. 'ಅಯ್ಯೋ, ತನ್ನ ಗಂಡನೆಂತಹ ಪ್ರಾಣಿ, ಪ್ರೀತಿ ಸುವುದಕ್ಕೇ ಬಾರದ ಪಶು. ತನ್ನನ್ನೊಂದು ದಿನವಾದರೂ ಈರೀತಿ ಪ್ರೀತಿಸಿದ್ದಾ ನೆಯೇ ? ತಾನೇನು ಹೇಳಲಿ ನೇಗಿಲ ಕೆಳಗಿನ ಎತ್ತಿನಂತೆ ಕೇಳುವನು. ಅರಸಿಕ, ಅಪ್ರಯೋಜಕ - - ಆದರೆ ಸುಂದರಮ್ಮನ ಗಂಡ ಎಂತಹ ರಸಿಕ !- - - ಇದ್ದರೆ ಇಂತಹ ಗಂಡನಿರಬೇಕು - - - ಇರಲಿ - - ತನ್ನ ಗಂಡನನ್ನು ಹಾಗೆಯೇ ಮಾರ್ಪ ಡಿಸಬೇಕು - - ಇಲ್ಲದಿದ್ದರೆ ತಾನು ರಾಜಮ್ಮನೇ ಅಲ್ಲ- - -' ಯೋಚನೆ ಸಾಗಿತ್ತು. ಅಷ್ಟರಲ್ಲಿ ಸುಂದರಮ್ಮನ ಗಂಡ ಬಂದುದರಿಂದ ರಾಜಮ್ಮ ಅಲ್ಲಿಂದ · ಕಾಲ್ದೆಗೆಯ ಬೇಕಾಯಿತು

ಕೃಷ್ಣಪ್ಪ ಹೆಂಡತಿಯು ಬರವನ್ನೇ ಇದಿರುನೋಡುತ್ತ, ಪೇಪರನ್ನೋದುತ್ತ ಕುಳಿತಿದ್ದ. ಅವಳು ಬಂದಾಗ ಅವಳ ಮುಖದಮೇಲೆ ಮುಂಡಿಸಿದ್ದ ಬೇಸರವನ್ನು ಕಂಡು ಆಶ್ಚರ್ಯಪಟ್ಟ. ತನ್ನನ್ನು ನೋಡಿಯೂ ನೋಡದಂತೆ ಒಳಗೆ ಹೋದ ಅವಳನ್ನು ನೋಡಿ ಖೇದಪಟ್ಟ. "ತನ್ನಂತಹ ವಿಧೇಯ ಗಂಡನನ್ನು ಇವಳೇಕೆ ಈರೀತಿ ಸತಾಯಿಸುತ್ತಾಳೆ. ·ಅವಳು ಕೇಳಿದುದನ್ನು, ಬೇಡಿದುದನ್ನು ತಾನು ತುಟಿ ಪಿಟಿಕ್ಕೆನ್ನದೆ ನಡೆಸಿಕೊಟ್ಟರೂ - - - ಏನೋ ಇರಬೇಕು, ಅಥವಾ ಅವಳಿ ಗೇನಾದರೂ ಮೈಲಿ ಸರಿಯಿಲ್ಲವೋ - - -?" ಕೃಷ್ಣಪ್ಪ ಯೋಚಿಸಿದ್ದ.

ಅಮ್ಮನವರ ವಾಣಿ ಒಳಗಿನಿಂದ ಕೇಳಿಬಂತು, "ಈ ಮನೆಯಲ್ಲಿ ದುಡಿಯು ವವರು ಮೂಗಿಗೆ ಕವಡೆ ಕಟ್ಟಿಕೊಂಡು ದುಡಿಯಬೇಕು. ಆದರೆ ಅವರ ಯೋಗ ಕ್ಷೇಮವನ್ನು ವಿಚಾರಿಸುವವರು ಯಾರೂ ಇಲ್ಲ - - - ತಲೆ ನೋವಿನಿಂದ ಸಾಯು ತ್ತಿದ್ದೇನೆ, ಒಂದು ತೊಟ್ಟು ಕಾಫಿ ಬೇಡವೇ - - - - ಹ್ಞು - - - ಅಯ್ಯೋ ಹಣೆ ಬರಹ - - - "

ಕೃಷ್ಣಪ್ಪ ಎದ್ದು ಅಡಿಗೆ ಮನೆಗೆ ಹೋದ - - - ಸ್ವಲ್ಪ ಹೊತ್ತಿನಲ್ಲೇ ಒಂದು ಬಟ್ಟಲು ಬಿಸಿ ಕಾಫಿಯೊಡನೆ ಹೆಂಡತಿಯಲ್ಲಿಗೆ ಹೊರಟ.

ರಾಜಮ್ಮ ಮಲಗಿಕೊಂಡೇ ಯೋಚಿಸುತ್ತಿದ್ದಳು " ಹಣವಿದ್ದ ಗಂಡನನ್ನು ಕೂಡಿದರೂ ಋಣವಿದ್ದಷ್ಟೇ ಅನುಭವಿಸುವುದು - - ತನ್ನವನು ಎಂತಹ ಅರಸಿಕ, - - - ತನ್ನಂತಹ ಸಾಧುವನ್ನು ಎಷ್ಟೇ ಹಿಂಸಿಸಿದರೂ ಮಾತನಾಡದೆ ಹೇಳಿದಂತೆ ಕೇಳುತ್ತಿದ್ದಾನಲ್ಲಾ, ಎಲ್ಲಾದರೂ ಗಾಣದ ಎತ್ತಾಗಿ ಹುಟ್ಟಬೇಕಾಗಿತ್ತು. ಅಪ್ಪಿ ತಪ್ಪಿ - - - " ಅಷ್ಟರಲ್ಲಿ ಕಾಫಿ ಬಂತು.

ಮರುಕ್ಷಣ ಪಕ್ಕದ ಮನೆಯಿಂದ ಸುಂದರಮ್ಮನ ಗಂಡ ಆಕೆಯನ್ನು ಸಂತೈಸುವುದೂ, ಆಕೆ ಸಂತಸದಿಂದ ನಗುವುದೂ ಕೇಳಿಬಂತು - - - ತನ್ನ ಗಂಡ ಬಟ್ಟೆ ಯೊಗೆಯುವ ಶಬ್ದವೂ ಜತೆಯಲ್ಲೇ ಕೇಳಿಬಂತು.

[ಇಷ್ಟರಲ್ಲೇ, ಕತೆ ಓ ಹೆನ್ರಿಯದೆಂದು ಗೊತ್ತಾಗಿರಬೇಕು]

—ಹೊನ್ನಮ್ಮ-ಎಚ್. ಮೂರ್ತಿ.

—o—



ಅಣ್ಣನ ಟೋಪಿಗಿಂತ ಅಪ್ಪನ್ದೇ ವಾಸಿ ಕಣೋ! .. ..

ತುಂಬಾ ಹಿಡಿಸುತ್ತೆ ....